# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:246 • ನೋಂದಣಿ ನಂ.:KARKAN27911 • ವಿಜಯನಗರ • 24.02.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:246 • Reg.No:KARKAN27911 • VIJAYANAGARA • 24.02.2024 • Saturay • Page:04 • Rs:2


# ಬೆಳೆ ಸಂರಕ್ಷಣೆ, ಬೇಸಿಗೆಗೆ ಕುಡಿಯುವ ನೀರು ಕಾಯ್ದಿರಿಸಲು ಕಾಲುವೆಗೆ ನೀರು

## 121ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಸಚಿವ ಶಿವರಾಜ್ ತಂಗಡಗಿ ಹೇಳಿಕೆ

## ವಿಜಯನಗರ, ಕೊಪ್ಪಳ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಿಗೆ ನೀರು ಹರಿಸಲು ತೀರ್ಮಾನ



**ಹಂಪಿ ಟೈಮ್ಸ್ ಹೊಸಪೇಟೆ**

ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರು ಆಗಿರುವ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ತುಂಗಭದ್ರಾ ಯೋಜನೆಯ 121ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆ ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ತುಂಗಭದ್ರಾ ಯೋಜನೆಯ ವಿಜಯನಗರ ಕಾಲುವೆ ನೀರು ಆಧರಿಸಿ ನಿಂತ ಬೆಳೆಗಳನ್ನು ಸಂರಕ್ಷಿಸಲು ಹಾಗೂ ಬೇಸಿಗೆ ಕಾಲದಲ್ಲಿ ಕುಡಿಯುವ ನೀರನ್ನು ಕಾಯ್ದಿರಿಸುವ ಕುರಿತಂತೆ ಸಭೆಯಲ್ಲಿದ್ದ ಸಚಿವರು, ಶಾಸಕರು, ಸಂಸದರು ಹಾಗೂ ಸದಸ್ಯರು ಮತ್ತು ನೀರಾವರಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗೂ ಕೃಷಿ ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿ ನೀರು ಒದಗಿಸುವ ಕಾಲಾವಧಿಯ ಬಗ್ಗೆ ನಿರ್ಣಯಿಸಲಾಯಿತು.

**ಜಿಲ್ಲಾಧಿಕಾರಿಗಳಿಗೆ ಸೂಚನೆ:** ಈ ಸಮಯದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಕಲಂ 144ನ್ನು ಅಳವಡಿಸಿ ಸೂಕ್ತ ಪೊಲೀಸ್ ಬಂದೋಬಸ್ತನ್ನು ಪಡೆದು ಕುಡಿಯುವ ನೀರಿನ ಕೆರೆ ಕಟ್ಟೆಗಳನ್ನು ತುಂಬಿಸಿಕೊಳ್ಳಲು ಸಭೆಯಲ್ಲಿ ತಿಳಿಸಲಾಯಿತು.

**ಕುಡಿಯುವ ನೀರಿಗೆ ಆದ್ಯತೆ:** ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ನೀರು ಹರಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಜಲಾಶಯದಲ್ಲಿನ ನೀರಿನ ಲಭ್ಯತೆ ಆಧಾರಿಸಿ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರು ಹಂಚಿಕೆ ಮಾಡಲಾಗಿದೆ. ಕುಡಿಯುವ ನೀರಿಗೆ ಮಾತ್ರ ಆದ್ಯತೆ ಕೊಟ್ಟು ಜನರಿಗೆ ನೀರು ಒದಗಿಸಲು ತೀರ್ಮಾನ ಮಾಡಲಾಗಿದೆ ಎಂದು ಸಚಿವರು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಸಭೆಯಲ್ಲಿ ಸಚಿವರಾದ ಡಾ.ಶರಣ್‌ಪ್ರಕಾಶ್ ಪಾಟೀಲ್, ಬಿ.ನಾಗೇಂದ್ರ, ಶಾಸಕರಾದ ಎಚ್.ಆರ್.ಗವಿಯಪ್ಪ, ಹಂಪನಗೌಡ ಬಾದರ್ಲಿ, ನಾ.ರಾ.ಭರತ್ ರೆಡ್ಡಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

**ತುಂಗಭದ್ರಾ ಎಡದಂಡೆ ಮುಖ್ಯಕಾಲುವೆ ಮೂಲಕ ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಿಗೆ ಗಣೇಕಲ್ ಜಲಾಶಯ ಹಾಗೂ ಇತರೆ ಕೆರೆ ಕಟ್ಟೆಗಳಿಗೆ ಮಾ.5ರಿಂದ ಮಾ.16ರವರೆಗೆ 1200 ಕ್ಯೂಸೆಕ್ ನಂತೆ ಕುಡಿಯುವ ನೀರಿಗೆ ಹರಿಸಲಾಗುತ್ತದೆ.**

ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ ಮೂಲಕ ಬಳ್ಳಾರಿ ಜಿಲ್ಲೆಗೆ ಹಾಗೂ ಇತರೆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಮಾ.10ರಿಂದ ಮಾ.20 ರವರೆಗೆ 100 ಕ್ಯೂಸೆಕ್ಸ್ ನಂತೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಮಾ.21ರಿಂದ ಮಾ.31ರವರೆಗೆ 100 ಕ್ಯೂಸೆಕ್ ನಂತೆ ಕುಡಿಯುವ ನೀರಿನ ಯೋಜನೆಗೆ ಹಾಗೂ ಕೆರೆ ಕಟ್ಟೆಗಳನ್ನು ತುಂಬಿಸಲಾಗುವುದು.

**ರಾಯ ಬಸವಣ್ಣ ಕಾಲುವೆಯಿಂದ ವಿಜಯನಗರ ಜಿಲ್ಲೆಗೆ ಹಂಚಿಕೆಯಾದ 0.260 ಟಿಎಂಸಿ ನೀರಿನಲ್ಲಿ ಮಾ.1ರಿಂದ ಮೇ 30ರವರೆಗೆ 100 ಕ್ಯೂಸೆಕ್ಸ್ ನಂತೆ ಆನ್ ಆಫ್ ನಂತೆ ಕುಡಿಯುವ ನೀರೊಳಗೊಂಡು ಹರಿಸಬಹುದಾಗಿದೆ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.**

# ಕೂಡ್ಲಿಗಿ ತಾಲೂಕಿನ ಮನೆಮಗಳು ನಾನು

# ಗುಡೇಕೋಟೆ ಉತ್ಸವಕ್ಕೆ ಬನ್ನಿ ಬಂಧುಗಳೇ..

**ಆತ್ಮೀಯ ಬಂಧುಗಳೆ,**

ಚಿತ್ರದುರ್ಗದ ಕೋಟೆಯ ಪಾಳೆಗಾರನಾಗಿದ್ದ ಮದಕರಿ ನಾಯಕನ ಕೋಟೆಯ ಕಾವಲುಗಾರ ಚಲವಾದಿ ಸಮುದಾಯದ ಕಹಳೆ ಮದ್ದಹನುಮಪ್ಪನ ಹೆಂಡತಿ ನಾನಾಗಿದ್ದರೂ, ನಾನು ಹುಟ್ಟಿದ ಊರು, ಆಟವಾಡಿ ಬೆಳೆದ ನೆಲ ಹಾಗೂ ಪರಾಕ್ರಮಶಾಲಿಗಳಾದ ಪಾಳೇಗಾರರು ಆಡಳಿತ ನಡೆಸಿರುವ ನನ್ನ ತವರೂರು ಗುಡೇಕೋಟೆ. ಇದೇ ಮೊದಲ ಬಾರಿ ಸರಕಾರವೇ ನನ್ನ ತವರಲ್ಲಿ ಉತ್ಸವ ಆಚರಿಸುವ ವಿಷಯ ಕೇಳಿ ಎದೆ ತುಂಬಿ ಬಂದಿತು.

ಹತ್ತಾರು ವರ್ಷಗಳಿಂದ **'ಒನಕೆ ಓಬವ್ವನ ಉತ್ಸವ'** ಆಚರಿಸಬೇಕೆಂದು ನೀವೆಲ್ಲಾ (ತಾಲೂಕಿನ ಜನತೆ) ಒತ್ತಾಯ ಮಾಡುತ್ತಿದ್ದರೂ, ಯಾವೊಬ್ಬ ಜನಪ್ರತಿನಿಧಿಯೂ ಈ ಬಗ್ಗೆ ಗಮನಕೊಡದ ಸ್ಥಿತಿಯನ್ನು ಕಂಡು ಒಳಗೊಳಗೇ ನೊಂದು ಕೊಳ್ಳುತ್ತಿದ್ದೆ. ಹಾಗಾಗಿ, ನನ್ನೂರಿನ ಜನರೇ ಸೇರಿ ಕಳೆದ ವರ್ಷ ಮಾರ್ಚ್‌ನಲ್ಲಿ ಗುಡೇಕೋಟೆ ಉತ್ಸವ ಆಚರಿಸಿದ್ದು ಕಂಡು 'ಹಾಲುಂಡ ತವರೂರು ತಣ್ಣಗಿರಲೆಂದು' ಹಾರೈಸಿ ಸಂತಸ ಪಟ್ಟಿದ್ದೆ. ಅಲ್ಲದೆ, ಕಲಾವಿದರು, ಮಕ್ಕಳು, ಮಹಿಳೆಯರು, ಜನಪ್ರನಿಧಿಗಳು ಸೇರಿ ಸುತ್ತಲಿನ ಹತ್ತಾರು ಹಳ್ಳಿಗಳ ಜನರು ವೇದಿಕೆಯಲ್ಲಿ ನನ್ನನ್ನು ಹಾಗೂ ನಮ್ಮ ಪಾಳೇಗಾರ ದೊರೆಗಳನ್ನು ಸ್ಮರಿಸಿದ ಪರಿಯನ್ನು ನಾನೆಂದೂ ಮರೆಯಲಾರೆ.



ಅರೇ, ಇದ್ಯಾರಪ್ಪಾ.. ಹೀಗೆ ಹೇಳುತ್ತಿದ್ದಾರಲ್ಲ ಎಂಬ ಅನುಮಾನ ಮೂಡಿರಬಹುದಲ್ವೇ? ನನ್ನ ತವರೂರಿನಲ್ಲಿ ನೀವೆಲ್ಲಾ ಸಂಭ್ರಮ ಪಡುವುದನ್ನು ಕಾಣುವ ಕಾತುರವೂ ನನ್ನಲ್ಲಿದೆ. ನಾನ್ಯಾರೆಂದು ನಿಮಗೆ ಈಗಲೇ ಹೇಳಲಾರೆ ಗೊತ್ತಾ..

ಬಂಧುಗಳೇ, ಭರವಸೆ ನೀಡುವುದರಲ್ಲಿ ರಾಜಕಾರಣಿಗಳು ಮಹಾ ಶೂರರು ಹಾಗೂ ಕೊಟ್ಟ ಮಾತು ಉಳಿಸಿಕೊಳ್ಳುವವರ ಸಂಖ್ಯೆ ತೀರಾ ವಿರಳ ಎನ್ನುವುದನ್ನು ಸಾಕಷ್ಟು ಸಲ ಕೇಳಿದ್ದೆ ಹಾಗೂ ನೋಡಿದ್ದೆ. ಆದರೆ, ನನ್ನ ತವರೂರು ಕ್ಷೇತ್ರದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಕೊಟ್ಟ ಮಾತು ಉಳಿಸಿಕೊಂಡಿರುವುದು ನನಗೆ ಅತೀವ ಸಂತೋಷವಾಗಿದೆ. ನನ್ನ ತವರೂರ ನೆಲದಲ್ಲಿ ನಡೆಯುವ ಉತ್ಸವ ಆಚರಣೆಗೆ ಸರಕಾರದಿಂದ 30 ಲಕ್ಷ ರೂ. ಅನುದಾನ ಬಿಡುಗಡೆಗೊಳಿಸಲು ಶ್ರಮಿಸಿರುವುದ ಕೇಳಿ ಕುಣಿದು ಕಪ್ಪಳಿಸಿದ್ದೇನೆ. ಇದೀಗ, ನನ್ನ ತವರೂರಿನಲ್ಲಿ ನಡೆಯುವ ಉತ್ಸವ ನೋಡುವ ಕಾತುರ ನನಗಂತೂ ಇದೆ. ಹಾಗಾಗಿ, ನೀವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಮೂಲಕ ನಾವೆಲ್ಲಾ ಸಂಭ್ರಮಿಸೋಣ ಬನ್ನಿ. ನಿಮ್ಮ ನಿರೀಕ್ಷೆಯಲ್ಲಿ ನಾನೂ ಸೇರಿ ನಮ್ಮ ಪಾಳೇಗಾರ ರಾಜರು ಕಾಯುತ್ತಿರುತ್ತೇವೆ.

**ಇತಿ ನಿಮ್ಮ ಮನೆ ಮಗಳು**
**ವೀರವನಿತೆ ಒನಕೆ ಓಬವ್ವ**
**(ಚಿತ್ರದುರ್ಗದ ಕೋಟೆ ರಕ್ಷಿಸಿದ ಸಾಹಸಿ)**

### ಗತ ವೈಭವದ ಮೆಲುಕು

ವೀರ ಪರಾಕ್ರಮಕ್ಕೆ ಹೆಸರಾದ ಪಾಳೇಗಾರರ ಆಡಳಿತವು ಇತಿಹಾಸದ ಪುಟಗಳಲ್ಲಿ ಹುದುಗಿ ಹೋಗಿದ್ದರೂ, ಅಲ್ಲಿರುವ ಕೋಟೆ, ಕೊತ್ತಲುಗಳು, ಬುರುಜು, ಬತೇರಿಗಳು, ಕಟ್ಟಿಸಿದ ಕೆರೆಗಳು, ಕಲ್ಯಾಣಿಗಳೆಂಬ ಕುರುಹುಗಳು ಈಗಲೂ ನನ್ನ ತವರೂರಿನಲ್ಲಿವೆ. ವೀರವನಿತೆ ಎಂಬ ಬಿರುದು ಪಡೆದಿರುವ ಒನಕೆ ಓಬವ್ವಳಾದ ನಾನೂ ಕೂಡ್ಲಿಗಿ ತಾಲೂಕಿನ ಮನೆಮಗಳು ಎಂಬ ಹೆಮ್ಮೆ ಇದೆ. ಆದಿ ಮಾನವನ ಕಾಲದ ನೆಲೆಗಳು, ಪುರಾತನ ದೇವಸ್ಥಾನಗಳು ಸೇರಿ ಐತಿಹಾಸಿಕ ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದದ ಸೊಗಡು, ಎಲ್ಲಕ್ಕಿಂತ ಇತ್ತೀಚೆಗೆ ದೇಶದಲ್ಲೇ ಎರಡನೇ ಅತಿದೊಡ್ಡ ಕರಡಿಧಾಮ ಹೊಂದಿರುವ ಗುಡೇಕೋಟೆಯಲ್ಲಿ ಉತ್ಸವದ ಮೂಲಕ ಗತ ವೈಭವವನ್ನು ಮೆಲುಕು ಹಾಕುವ ಸಮಯ ಒದಗಿತಲ್ಲ ಎಂಬ ಖುಷಿಗೆ ಪಾರವೇ ಇಲ್ಲ. ಇಂಥ ಸಂಭ್ರಮಕ್ಕೆ ಅಣಿ ಮಾಡಿಕೊಟ್ಟ ರಾಜ್ಯ ಸರಕಾರಕ್ಕೂ, ಕ್ಷೇತ್ರದ ಶಾಸಕರಿಗೆ ನಿಮ್ಮೆಲ್ಲರ ಪರವಾಗಿ ಕೃತಜ್ಞತೆ ಸಲ್ಲಿಸುವುದನ್ನು ಮರೆಯಲಾರೆ.

### ಓಹೋ.. ಹೇಳೋದೇ ಮರೆತಿದ್ದೆ

ನನ್ನ ತವರೂರಿನಲ್ಲಿ ನಡೆಯುವ ಉತ್ಸವಕ್ಕೆ ಕರೆಯುವ ಖುಷಿಯಲ್ಲಿ ನಿಮಗೆ ಮುಖ್ಯವಾದ ವಿಷಯವನ್ನೇ ಹೇಳುವುದು ಮರೆತಿದ್ದೆ ಬಂಧುಗಳೆ. ನನ್ನ ತವರೂರು ಕೂಡ್ಲಿಗಿ ತಾಲೂಕಿನ ಕುದುರೆಡುವು ಎಂಬ ಕುಗ್ರಾಮವಾದರೂ, ಅಲ್ಲಿಗೆ ಕೂಗಳತೆ ದೂರದಲ್ಲಿರುವ ಗುಡೇಕೋಟೆಯ ಸರಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಫೆ.24 ಮತ್ತು 25ರಂದು ಗುಡೇಕೋಟೆ ಉತ್ಸವ ನಡೆಯಲಿದೆ. ಮೊದಲ ದಿನವಾದ ಫೆ.24ರ ಸಂಜೆ 4 ಗಂಟೆಗೆ ನಮ್ಮ ಆರಾಧ್ಯದೈವ ಶಿವ, ಪಾರ್ವತಿ ದೇವಸ್ಥಾನದಿಂದ ನಮ್ಮ ನೆಲದ ಸೊಗಡಿನ ಜಾನಪದ ಕಲಾತಂಡಗಳ ಶೋಭಾಯಾತ್ರೆ ನಡೆಯಲಿದೆ. ನಂತರ ವೇದಿಕೆಯಲ್ಲಿ ಸಚಿವರು, ಕ್ಷೇತ್ರದ ಶಾಸಕರು, ಗ್ರಾಪಂ ಜನಪ್ರತಿನಿಧಿಗಳು, ಅಧಿಕಾರಿಗಳ ಸಮ್ಮುಖದಲ್ಲಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ಸಿಗಲಿದೆ. ಅದಾದ ನಂತರ, ನಿಮ್ಮನ್ನೆಲ್ಲ ರಂಜಿಸುವಂಥ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯವೆ. ಎರಡನೇ ದಿನವಾದ ಫೆ.25ರಂದು ಬೆಳಗ್ಗೆ 11 ಗಂಟೆಗೆ ವಿಚಾರ ಸಂಕಿರಣ, ಸಂಜೆ 6 ಗಂಟೆಗೆ ಮಕ್ಕಳ ಸಾಂಸ್ಕೃತಿಕ ಕಲರವ, ನಾಟಕ.. ಹೀಗೆ, ಎರಡೂ ದಿನಗಳ ಕಾಲ ನಡೆಯುವ ಗುಡೇಕೋಟೆ ಉತ್ಸವಕ್ಕೆ ತಪ್ಪದೇ ಬರಬೇಕೆಂಬುದು ನನ್ನ ಕಳಕಳಿಯ ಮನವಿ ಬಂಧುಗಳೇ..




## ವಚನ ಅರಿವು

### ಕೂಡುವನು

**ಎಮ್ಮ ನಲ್ಲನವ್ವಾ, ನಲ್ಲರಿಗೆ ನಲ್ಲನು.**
**ವಂಚನೆಗೆ ನೆರೆಯನು, ನಿರ್ವಂಚನೆಗೆ ನೆರೆವನು,**
**ಉರಿಲಿಂಗದೇವನು.**

**– ಉರಿಲಿಂಗದೇವರು**

ಸರಳ ನಿರೂಪಣೆಯ ವಚನ. ಮನುಷ್ಯನ ಜೀವನಕ್ಕೆ ಮಾರ್ಗದರ್ಶನ ಮಾಡುತ್ತದೆ. ಶರಣರ ಪರಿಕಲ್ಪನೆಯಲ್ಲಿ ಸತಿಪತಿ ಭಾವ ಒಂದು. ಲಿಂಗವೇ ಪತಿ, ಶರಣ ಸತಿ ಎಂಬ ಭಾವ. ಮಾನವ ತನ್ನ ಬದುಕಿನಲ್ಲಿ ಪ್ರಾಮಾಣಿಕತೆಯ ದಾರಿಯನ್ನು ಹಿಡಿಯಬೇಕು. ದೇಹ, ಮನಸ್ಸನ್ನು ಶುದ್ಧವಾಗಿಟ್ಟುಕೊಂಡು ಸದಾ ಸದ್ವಿಚಾರವನ್ನೇ ಮಾಡುತ್ತ, ಸನ್ನಡತೆಯಲ್ಲಿ ನಡೆಯುವುದರಿಂದ ಶಿವನ ಒಲುಮೆ ದೊರೆಯುತ್ತದೆ ಎನ್ನುತ್ತಾರೆ ಉರಿಲಿಂಗದೇವರು.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಕೃತ್ಯ ಅತ್ಯಂತ ಖಂಡನೀಯ



40 ದೇಶಪ್ರೇಮಿ ಸೈನಿಕರನ್ನು ಬಲಿತೆಗೆದುಕೊಂಡ ಪುಲ್ವಾಮ ದುರಂತದ ಬಗ್ಗೆ ಸತ್ಯ ಹೇಳಿದ್ದೇ ಮಾಜಿ ರಾಜ್ಯಪಾಲರು ಮತ್ತು ಬಿಜೆಪಿಯ ಮಾಜಿ ರಾಷ್ಟ್ರೀಯ ಉಪಾಧ್ಯಕ್ಷರಾದ ಸತ್ಯಪಾಲ್ ಮಲಿಕ್ ಅವರ ಅಪರಾಧವಾಗಿ ಹೋಯಿತು. ನಿರೀಕ್ಷೆಯಂತೆ ಅವರ ಮನೆ ಮೇಲೆ ಸಿಬಿಐ ದಾಳಿ ನಡೆಸಿ, ಬೆದರಿಸುವ ಪ್ರಯತ್ನಮಾಡಿದೆ.

ಪುಲ್ವಾಮ ದುರಂತ ನಡೆದ ಸಮಯದಲ್ಲಿ ಸತ್ಯಪಾಲ್ ಮಲಿಕ್ ಅವರು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದ ಕಾರಣ ಕೇಂದ್ರದ ವಿರುದ್ಧದ ಅವರ ಆರೋಪವನ್ನು ತಳ್ಳಿಹಾಕಲಾಗದು. ಸತ್ಯವನ್ನು ಎದುರಿಸಲಾಗದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರೀಕ್ಷೆಯಂತೆ ಅವರಿಗೆ ಸಿಬಿಐ ತನಿಖೆ ಮೂಲಕ ಚಿತ್ರಹಿಂಸೆ ನೀಡಲು ಹೊರಟಿದೆ, ಈ ಕೃತ್ಯ ಅತ್ಯಂತ ಖಂಡನೀಯ.

ಕೇಂದ್ರ ಸರ್ಕಾರ ತನ್ನ ದುಷ್ಟಬುದ್ಧಿಯನ್ನು ತಿದ್ದಿಕೊಂಡು, ಸತ್ಯಪಾಲ್ ಮಲಿಕ್ ಅವರ ಮೇಲಿನ ದೌರ್ಜನ್ಯ ನಿಲ್ಲಿಸಬೇಕು. ಸತ್ಯವನ್ನು ಸಹಿಸದಿರುವ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಪ್ರಶ್ನಿಸುವವರ ವಿರುದ್ಧ ಐಟಿ, ಇಡಿ, ಸಿಬಿಐಗಳನ್ನು ಛೂ ಬಿಟ್ಟು ಬಲತ್ಕಾರದಿಂದ ಬಾಯಿ ಮುಚ್ಚಿಸುವ ಪ್ರಯತ್ನನ್ನು ಮುಂದುವರಿಸಿದ್ದಾರೆ. ಆದರೆ ದೇಶದ ಜನತೆ ಇಂತಹ ಕುಟಿಲ ಕಾರಸ್ತಾನಗಳನ್ನು ಅರ್ಥಮಾಡಿಕೊಳ್ಳುವಷ್ಟು ಪ್ರಬುದ್ಧ ರಾಗಿದ್ದಾರೆ.

**– ಸಿದ್ದರಾಮಯ್ಯ ಮುಖ್ಯಮಂತ್ರಿ**

## ಮಾಜಿ ಸಿಎಂ ಫಾರೂಕ್ ಅಬ್ದುಲ್ಲಾ ಅವರ ಕುಶಲೋಪರಿ ವಿಚಾರಿಸಿದ ಸಿಎಂ ಸಿದ್ದರಾಮಯ್ಯ



**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬೆಂಗಳೂರಿಗೆ ಖಾಸಗಿ ಕಾರ್ಯಕ್ರಮದ ನಿಮಿತ್ತ ಆಗಮಿಸಿದ್ದ ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರನ್ನು ಭೇಟಿಯಾಗಿ ಕುಶಲೋಪರಿ ವಿಚಾರಿಸಿದರು. ಡಿಸಿಎಂ ಡಿ. ಕೆ.ಶಿವಕುಮಾರ್ ಉಪಸ್ಥಿತರಿದ್ದರು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಪರೀಕ್ಷೆ ಯುದ್ಧವಲ್ಲ... ಸಂತಸದ ಸಾಗರ

ನಮ್ಮ ಮಕ್ಕಳಲ್ಲಿ ಸಾಮಾನ್ಯವಾಗಿ ಬೇರೂರಿರುವ ಅಂಶವೆಂದರೆ ಪರೀಕ್ಷೆ ಬಹು ದೊಡ್ಡ ಸವಾಲು, ಅದನ್ನು ಎದುರಿಸುವುದು ಸುಲಭದ ಮಾತಲ್ಲ. ಯಾಕಾದರೂ ಈ ಪರೀಕ್ಷಾ ಕಾಲ ಆರಂಭವಾಗುತ್ತದೆ ಎಂದು ನೊಂದು ಬೆಂದವರೆ ಹೆಚ್ಚು. ವಿದ್ಯಾರ್ಥಿಗಳು ಹಳಿ ತಪ್ಪುತ್ತಿರುವುದು ಇಲ್ಲೆ. ಪರೀಕ್ಷೆಯನ್ನು ಅವರು ನೋಡುವ ದೃಷ್ಟಿಕೋನವನ್ನು ಬದಲಿಸಿಕೊಂಡರೆ ಅರ್ಧ ಹಾದಿ ಸವೆಸಿದಂತೆ. ಪರೀಕ್ಷೆಯನ್ನು ತಿರಸ್ಕಾರದಿಂದ ನೋಡುವ ಬದಲು ಮುಕ್ತವಾಗಿ ಸ್ವೀಕರಿಸಬೇಕು. ಒಂದು ವರ್ಷದ ಅವಧಿಯಲ್ಲಿ ನನ್ನ ಜ್ಞಾನದಲ್ಲಾಗಿರುವ ಬೆಳವಣಿಗೆಯನ್ನು ತಿಳಿಯಲು ಇದು ಸರಿಯಾದ ಮಾರ್ಗ ಎಂದು ಅರಿಯಬೇಕು. ನಾನು ತಿಳಿದಿರುವುದನ್ನು ಗೊತ್ತುಪಡಿಸಲು ಇರುವ ಸರಳ ಮಾರ್ಗವೆಂದರೆ ಬರವಣಿಗೆಯ ಪರೀಕ್ಷೆ. ಒಂದೇ ಸಮಯದಲ್ಲಿ ಲಕ್ಷಾಂತರ ಮಕ್ಕಳನ್ನು ಅಳೆಯಲು ಬರವಣಿಗೆಯ ಪರೀಕ್ಷೆಯೊಂದೇ ಇದುವರೆಗೂ ನಮಗೆ ಸೂಕ್ತವೆನಿಸಿದ ರಹದಾರಿ ಎಂದು ಒಂದು ಸಾರಿ ಮನದಲ್ಲಿ ಗಟ್ಟಿ ಮಾಡಿಕೊಂಡರೆ ಪರೀಕ್ಷೆ ಮತ್ತಷ್ಟು ಸಲೀಸು.

ನಮ್ಮ ಮಕ್ಕಳು ನಿರೀಕ್ಷೆಗೂ ಮೀರಿ ಓದಿರುತ್ತಾರೆ. ಓದುವುದೊಂದೇ ಮುಖ್ಯ ಅಜೆಂಡ ಮಾಡಿಕೊಂಡಿರುತ್ತಾರೆ. ಬಹಳ ಮಹತ್ವದೆಂದರೆ ಓದಿದ್ದನ್ನು ಹೇಗೆ ನೆನಪಿಟ್ಟುಕೊಳ್ಳುವುದು ಮತ್ತು ಯಾವರೀತಿ ಅಂಕಗಳಾಗಿ ಬದಲಾಯಿಸಿ ಕೊಳ್ಳಬೇಕು ಎಂಬ ಕೌಶಲವೂ ಇಲ್ಲದಿರೆ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಗುತ್ತದೆ. ಅದಕ್ಕೆ ಅತ್ಯಂತ ಸುಲಭವಾದ ಎಂಟು ಸೂತ್ರಗಳು ನಮ್ಮ ಬಳಿ ಇವೆ. ಅವನ್ನು ಅನುಸರಿಸಿದರೆ ಯಶ ನಿಮ್ಮ ಕೈಗೆಟುಕುವುದರಲ್ಲಿ ಅನುಮಾನವಿಲ್ಲ.



### ಟೈಂ :–

ಸಮಯದ ಮಹತ್ವವನ್ನು ಸಾರುವ ಅನೇಕ ಕಥೆಗಳು ಹಾಗೂ ಉದಾಹರಣೆಗಳು ಪ್ರಚಲಿತದಲ್ಲಿವೆ. ಅವುಗಳತ್ತ ಒಮ್ಮೆ ಕಣ್ಣಾಡಿಸಬೇಕು. ವಿದ್ಯಾರ್ಥಿಗಳ ಜೀವನದ ಸಮಯ ಅತೀ ಅಮೂಲ್ಯವಾದುದು. ಅದನ್ನು ಸರಿಯಾಗಿ ಬಳಸಲೇಬೇಕು. ಅದರಲ್ಲೂ ಪರೀಕ್ಷಾ ಸಮಯದಲ್ಲಂತೂ ಪ್ರತಿ ನಿಮಿಷ, ಗಂಟೆಗಳಿಗೆ ಬೆಲೆ ಕಟ್ಟಲಾಗುವುದಿಲ್ಲ. ಅನೇಕರು ಮೊದಲಿಗೆಲ್ಲಾ ಸಮಯವನ್ನು ಬೇಕಾಬಿಟ್ಟಿ ವ್ಯಯಮಾಡಿ ಕೊನೆಯ ಗಳಿಗೆಯಲ್ಲಿ ಪಶ್ಚಾತ್ತಾಪ ಪಡುತ್ತಾ, ಊಟ, ನಿದ್ದೆ ಬಿಟ್ಟು ಓದುತ್ತಾರೆ. ಇದು ತರವಲ್ಲ. ಪರೀಕ್ಷಾ ದಿನಗಳಲ್ಲಿ, ದಿನದ 24 ಗಂಟೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಬೇಕು. ಒಂದು ಭಾಗ ಸಂಪೂರ್ಣ ನಿದ್ರೆಗೆ ಮೀಸಲು. ಎರಡನೆ ಭಾಗ ಊಟ ಇತ್ಯಾದಿಗಳ ಜೊತೆಗೆ ವಿಶ್ರಾಂತಿ, ಮೂರನೇ ಭಾಗವನ್ನು ಅಭ್ಯಾಸಕ್ಕೆ ಮೀಸಲಿಡಬೇಕು.

ಓದಿನ ಸಮಯದಲ್ಲಿ ಪ್ರತಿ ನಿಮಿಷಕ್ಕೂ ಗಮನಕೊಡಬೇಕು. ಬೇರೆ ಯಾವುದೋ ವಿಷಯದ ಕುರಿತು ಚಿಂತಿಸುತ್ತಾ ವೇಳೆ ಕಳೆಯಬಾರದು. ವಿಷಯಗಳತ್ತ ಹೆಚ್ಚು ಕೇಂದ್ರಿತವಾಗಿರಬೇಕು. ಕೆಲ ಗಂಟೆ ಓದಿದ ಮೇಲೆ, ಒಮ್ಮೆ ಓದಿದ್ದನ್ನು ನೆನಪಿಸಿಕೊಳ್ಳಬೇಕು. ನಾನು ಏನನ್ನು ಓದಿದ್ದೇನೆ?. ಎಷ್ಟು ಓದಿದ್ದೇನೆ ?. ಅದರಿಂದ ನನ್ನ ಜೇಬಿಗೆ ಎಷ್ಟು ಅಂಕಗಳನ್ನು ಇಳಿಸಿಕೊಂಡೆ? ಎಂಬುದನ್ನು ನೋಡಿಕೊಂಡು ಮುಂದೆ ಸಾಗಿದಲ್ಲಿ ಹೆಚ್ಚು ಫಲ ಸಿಗುತ್ತದೆ. ಹೊತ್ತು ಕಳೆದರೆ ಸಿಗುವುದಿಲ್ಲ ಎಂಬುದು ಸದಾ ನೆನಪಿನಲ್ಲಿರಲಿ. ಹಾಗೆಯೇ ಓದುವುದಕ್ಕೆ ಮಕ್ಕಳಿಗೆ ಯಾವ ವೇಳೆ ಪ್ರಾಶಸ್ತ್ಯವೋ ಆ ವೇಳೆಯೇ ಉತ್ತಮವಾದುದು. ಇನ್ನೊಬ್ಬರ ಮಾತಿಗೆ ಹೆಚ್ಚು ಕಿವಿಗೊಡಬಾರದು.

### ಓದು :–

ಶಿಕ್ಷಕರು ಪಾಠ ಮಾಡುವಾಗ ಗಮನವಿಟ್ಟು ಆಲಿಸಿದರೆ ಅರ್ಧಕ್ಕಿಂತ ಹೆಚ್ಚು ಮನನವಾಗಿರುತ್ತದೆ. ನಂತರ ಅದರಲ್ಲಿರುವ ಪ್ರಶ್ನೆಗಳಿಗೆ ಸ್ವತಃ ನೋಟ್ಸ ಬರೆವುದು, ಪೂರಕವಾದ ಪುಸ್ತಕಗಳ ಓದುವುದು, ತನ್ನನ್ನು ತಾನೇ ಸ್ವತಃ ಮೌಲ್ಯಮಾಪನ ಮಾಡಿಕೊಳ್ಳುವುದರಿಂದ ಉಳಿದರ್ಧ ನೆನಪಿನಲ್ಲಿರುತ್ತದೆ. ಪರೀಕ್ಷಾ ಸಮಯ ಹತ್ತಿರವಾದಂತೆ ಓದಲು ಕಠಿಣ ವಿಷಯ, ಸರಳ ವಿಷಯಗಳಿಗೆ ಅನುಗುಣವಾಗಿ ವೇಳಾಪಟ್ಟಿ ತಯಾರಿಸಿಕೊಳ್ಳಬೇಕು.

ಯಾರ ಒತ್ತಾಯಕ್ಕೆ ಓದುವುದು ಬೇಡ. ಅದು ನನ್ನ ಭವಿಷ್ಯ ಎಂದು ಸಂಕಲ್ಪಮಾಡಿಕೊಂಡು, ಅದರಲ್ಲಿ ಸಂತಸವನ್ನು ಕಾಣಬೇಕು. ಆಗ ಮಾತ್ರ ನಮ್ಮ ಗುರಿ ತಲುಪಲು ಸಾಧ್ಯ. ಒಂದು ಪಾಠವನ್ನು ಪೂರ್ಣ ಮನಸ್ಸಿಟ್ಟು ಓದಬೇಕು. ನಂತರ ಅದಕ್ಕೆ ಸಂಬಂಧಿಸಿದ ನೋಟ್ಸ್, ಟಿಪ್ಪಣಿ, ಡೈಜಸ್ಟ್ . . .ಮುಂತಾದವುಗಳನ್ನು ಓದಬೇಕು. ಆ ಪಾಠದಲ್ಲಿ ಬರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಬೇಕು. ಗೊಂದಲವಾದರೆ ಅಲ್ಲಿಯೇ ಸರಿಪಡಿಸಿಕೊಳ್ಳಬೇಕು. ಒಂದು ಸಾರಿ ಬರೆಯುವುದು ಹತ್ತು ಸಾರಿ ಓದುವುದಕ್ಕೆ ಸಮಾನ. ಇನ್ನು ಕೆಲವರು ನೆನಪಿಟ್ಟುಕೊಳ್ಳಲು ಬಳಸುವ ಸೂತ್ರವೆಂದರೆ:– ಸ್ವಲ್ಪ ಸಮಯ ಓದುತ್ತಾರೆ. ನಂತರ ಓದಿರುವುದರ ಪ್ರಮುಖಾಂಶಗಳನ್ನು ನೆನಪಿಸಿಕೊಳ್ಳುತ್ತಾ ಬರೆಯುತ್ತಾರೆ. ಅದರಲ್ಲಿ ಎಲ್ಲವೂ ನೆನಪಿಗೆ ಬಾರದಿದ್ದರೆ ಮತ್ತೆ ಓದಿ, ಬಿಟ್ಟಿರುವ ಅಂಶಗಳನ್ನು ಬರೆದುಕೊಳ್ಳುತ್ತಾರೆ. ನಂತರ ಸ್ವಲ್ಪ ಸಮಯ ವಿರಾಮ ಪಡೆದು ಮತ್ತೆ ಹೀಗೆಯೇ. . . . ಓದುವುದನ್ನು ಅಭ್ಯಾಸಮಾಡುವುದು ಒಳ್ಳೆಯ ಪದ್ಧತಿ. ಇದು ಓದು ಮತ್ತು ಬರಹಕ್ಕೆರಡಕ್ಕೂ ಆದ್ಯತೆ ನೀಡುತ್ತದೆ.



**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು, ಹಗರಿಬೊಮ್ಮನಹಳ್ಳಿ**

Scan For Digital Colourful
HAMPI TIMES E-paper

### ಬರಹ :–

ಅನೇಕರಿಗೆ ಬರವಣಿಗೆ ದೊಡ್ಡ ಸಮಸ್ಯೆಯಾಗಿರುತ್ತದೆ. ಆದರೆ ಗಮನಿಸಬೇಕಾದುದೆಂದರೆ ವಿದ್ಯಾರ್ಥಿಗಳ ಭವಿಷ್ಯ ಅವರ ಬರವಣಿಗೆಯಲ್ಲಿಯೇ ಅಡಕವಾಗಿರುತ್ತದೆ. ಹಾಗಾಗಿ ಅವರು ಪರೀಕ್ಷೆಗಿಂತ ಮುಂಚಿತವಾಗಿಯೇ ಉತ್ತರಗಳನ್ನು ಸುಂದರವಾಗಿ, ದೋಷಗಳಾಗದಂತೆ, ಆರಂಭದ ಆಕರ್ಷಣೆ– ಮುಕ್ತಾಯದ ನಿಲುವುಗಳ ಬಗ್ಗೆ ಖಚಿತತೆ ಇರುವುದು ಹೆಚ್ಚು ಅನುಕೂಲ.

ಅಭ್ಯಾಸಕ್ಕಾಗಿ ಬರೆಯುವಾಗ ವಿಷಯ/ಶೀರ್ಷಿಕೆಯ ಚಿತ್ರವು ಪುಟದ ಮಧ್ಯದಲ್ಲಿರಲಿ. ನಂತರ ಅದಕ್ಕೆ ಪೂರಕವಾದ ಅತ್ಯಂತ ಮುಖ್ಯಪದಗಳನ್ನು ಸುತ್ತಲೂ ಬೇರೆ ಬೇರೆ ಬಣ್ಣಗಳಿಂದ ಬರೆಯಬೇಕು. ಅಲ್ಲಿ ವಿವರಣಾತ್ಮಕ ವಾಕ್ಯಗಳಿಗೆ ಅವಕಾಶವೇ ಇಲ್ಲ. ಅತ್ಯಂತ ಪ್ರಮುಖ ಪದಗಳನ್ನು ಗುರುತುಮಾಡುವುದು, ಬಾಣದಗೆರೆ ಎಳೆಯುವುದರ ಮೂಲಕ ಇಲ್ಲವೇ ಯಾವುದೇ ರೀತಿಯಲ್ಲಿ ಒತ್ತು ನೀಡಿ ತಕ್ಷಣ ಎದ್ದು ಕಾಣುವಂತಿರಬೇಕು. ಅದರ ಕುರಿತು ಹೊಸ ಆಲೋಚನೆಗಳು ಬಂದರೆ ಸಂಗ್ರಹಿಸಿ ಅವನ್ನೂ ಗುರುತು ಹಾಕಿಕೊಳ್ಳಬೇಕು. ನಂತರ ಆ ಚಿತ್ರ ನೋಡಿದ ತಕ್ಷಣ ಎಲ್ಲವೂ ನೆನಪಿಗೆ ಬರುತ್ತದೆ.

### ಅಭ್ಯಾಸ :–

ಅನೇಕರಿಗೆ ಪಠ್ಯ ಪುಸ್ತಕ ಓದಬೇಕೆ?. ಡೈಜಸ್ಟ್ ಓದಬೇಕೆ?. ನೋಟ್ಸ್ ಓದಬೇಕೆ?. ಎಂಬುದರ ತೊಳಲಾಟದಲ್ಲಿಯೇ ಸಮಯ ಹಾಳುಮಾಡುತ್ತಾರೆ. ಪರೀಕ್ಷಾ ಓದಿಗೆ ಪಠ್ಯಪುಸ್ತಕಕ್ಕೆ ಮೊದಲ ಪ್ರಾಶಸ್ತ್ಯ ಚಿಕ್ಕ ಉತ್ತರ ಮತ್ತು ಬಹು ಆಯ್ಕೆಯ ಪ್ರಶ್ನೆಗಳಿಗೆ ಪಠ್ಯಪುಸ್ತಕವೇ ಮೂಲಾಧಾರ. ಅಗತ್ಯವಾದುದನ್ನು ಅಭ್ಯಾಸ ಮಾಡದೇ ಇರಬಾರದು ಹಾಗೆಯೇ ಅನಗತ್ಯವಾದುದನ್ನು ಅಭ್ಯಾಸ ಮಾಡಬಾರದು. ಪರೀಕ್ಷೆಯಲ್ಲಿ ಅಂಕವೇ ಪ್ರಧಾನವಾಗಿರುವುದರಿಂದ ಅದರತ್ತ ಮಾತ್ರ ಲಕ್ಷ್ಯ ನೆಟ್ಟಿರಬೇಕು.

ನಿರಂತರವಾಗಿ ಓದುವುದು – ಬರೆಯುವುದು ಯಾರಿಗೂ ಸಹ್ಯವಲ್ಲ. ಅದಕ್ಕೆ ವಿಭಿನ್ನವಾದ ಮಾರ್ಗಗಳನ್ನು ಕಂಡುಕೊಳ್ಳಬೇಕು. ಅಂದರೆ ಮುಖ್ಯವಾದ ಸೂತ್ರ, ಇಸ್ವಿ, ಪ್ರಮೇಯ, ಚಿತ್ರಗಳನ್ನು ದೊಡ್ಡ ಅಕ್ಷರದಲ್ಲಿ ಬರೆದು ಕೊಠಡಿಯ ಗೋಡೆಗೆ ಅಂಟಿಸಿಕೊಳ್ಳಬೇಕು. ಅಡ್ಡಾಡುವಾಗ ಅದರತ್ತ ಕಣ್ಣ ಹಾಯಿಸಿದರೆ ಸಾಕು, ನಮಗೆ ಅರಿವಿಲ್ಲದಂತೆ ಆ ಅಂಶಗಳು ತಲೆಯೊಳಗೆ ಭದ್ರವಾಗಿರುತ್ತವೆ.

ಗುಂಪು ಚರ್ಚೆಯೂ ನೆನಪಿಟ್ಟುಕೊಳ್ಳಲು ಒಳ್ಳೆಯ ಅಸ್ತ್ರ. ಮೂರು–ನಾಲ್ಕು ಗೆಳೆಯರು ಜೊತೆಗೂಡಿ, ಒಂದು ವಿಷಯದ ಕುರಿತು ಗುಂಪು ಚರ್ಚೆಯನ್ನು ಕೆಲವು ಗಂಟೆ ಮಾಡಿದರೆ ಹೆಚ್ಚು ಮನನವಾಗುತ್ತದೆ. ಗೆಳೆಯರ ವಿಚಾರಗಳು ಕೆಲಸಾರಿ ನೆರವಿಗೆ ಬರುತ್ತವೆ. ಆದರೆ ಚರ್ಚೆ ಅನಗತ್ಯ ವಿಷಯಗಳತ್ತ ವಾಲದಂತೆ ಎಚ್ಚರಿಕೆ ವಹಿಸಬೇಕು.

ಮೊಬೈಲ್ ಎಲ್ಲರನ್ನೂ ಆಕರ್ಷಿಸಿದೆ. ಅದನ್ನು ಒಳ್ಳೆಯದಕ್ಕೂ ಅದರಲ್ಲೂ ಪರೀಕ್ಷಾ ವಿದ್ಯಾರ್ಥಿಗಳ ನೆರವಿಗೆ ಬಳಸಬಹುದು. ಮೊಬೈಲ್‌ನಲ್ಲಿ ಪ್ರಶ್ನೋತ್ತರಗಳನ್ನು ಚೆನ್ನಾಗಿ ರೆಕಾರ್ಡ್ ಮಾಡಿಕೊಳ್ಳಬೇಕು. ಆನಂತರ ಏನಾದರೂ ಕೆಲಸ ಮಾಡುತ್ತಿರಿ, ಅದನ್ನು ಕಿವಿಯಲ್ಲಿ ಹಾಕಿಕೊಂಡರೆ ಸಾಕು. ಇದು ಓದುವುದಕ್ಕಿಂತ ಹೆಚ್ಚು ಖುಷಿಯನ್ನು ಕೊಡುತ್ತದಲ್ಲದೆ. ಸಂತಸದ ಓದು ಹೆಚ್ಚು ಪರಿಣಾಮಕಾರಿಯಾದುದು.

### ಭೋಜನ :–

ಪರೀಕ್ಷೆ ಕಾಲದಲ್ಲಿ ಕೈಗೆ ಸಿಕ್ಕಿದ್ದನ್ನೆಲ್ಲಾ ತಿನ್ನುವುದು ಎಷ್ಟು ಅಪಾಯಕಾರಿ ಹಾಗೆಯೇ ತಿನ್ನದೇ ಇರುವುದು ಅಷ್ಟೆ ಅಪಾಯಕಾರಿ. ಆ ನಿಟ್ಟಿನತ್ತ ಮುತುವರ್ಜಿ ವಹಿಸಲೇ ಬೇಕು. ಎಣ್ಣೆಯಿಂದ ಕರಿದ ಪದಾರ್ಥಗಳು, ಹೆಚ್ಚು ಸಿಹಿ–ಖಾರದ ಆಹಾರಗಳನ್ನು ಸೇವಿಸುವುದು ಬೇಡ. ಸಾಧ್ಯವಾದಷ್ಟು ಸಮತೋಲನ ಆಹಾರ ಸೇವನೆ ಸೂಕ್ತ. ಕೆಲವರು ನಿದ್ದೆಗೆಟ್ಟು ಓದುವುದಕ್ಕಾಗಿ ಅಕಾಲದಲ್ಲಿಯೂ ಕಾಫಿ/ಟೀಗಳ ಸೇವನೆ ಮಾಡುತ್ತಾರೆ. ಈ ಪಾನೀಯಗಳಿಂದ ದೂರವಿರುವುದೇ ಒಳ್ಳೆಯದು. ಮನೆಯ ಹೊರಗಡೆಯ ಆಹಾರವನ್ನು ಈ ಸಮಯದಲ್ಲಿ ತಿನ್ನಲೇಬಾರದು. ಉತ್ತಮವಾದ, ತಾಜಾ ತರಕಾರಿ–ಹಣ್ಣುಗಳ ಸೇವನೆ ಆರೋಗ್ಯಕರ. ಉತ್ತಮ ಆಹಾರ ಸೇವಿಸುವದರಿಂದ ದೈಹಿಕ ಮತ್ತು ಮಾನಸಿಕವಾಗಿ ಹೆಚ್ಚು ಚಟುವಟಿಕೆಯಿಂದಿರುತ್ತೇವೆ. ಮೆದುಳು ಹೆಚ್ಚು ಪ್ರಸನ್ನವಾಗುತ್ತದೆ. ಗ್ರಹಿಕೆ ಸುಲಭವಾಗುತ್ತದೆ.

### ನೀರು :–

ಬೇಸಿಗೆ ಕಾಲದಲ್ಲಿಯೇ ನಮ್ಮಲ್ಲಿ ಪರೀಕ್ಷೆಗಳು ಆರಂಭವಾಗುತ್ತವೆ. ನಮ್ಮ ದೇಹದಲ್ಲಿ 2/3ರಷ್ಟು ನೀರಿದೆ ಎಂಬುದನ್ನು ಮರೆಯಬಾರದು. ನೀರಿನಂಶ ಸದಾ ಸರಿಯಾದ ಪ್ರಮಾಣದಲ್ಲಿರಬೇಕು, ಇಲ್ಲದಿರೆ ಸಂಕಷ್ಟಕ್ಕೆ ಸಿಲುಕುತ್ತೇವೆ. ಹಾಗಾಗಿ ಬಾಯಾರಿಕೆಯಾಗುವುದಕ್ಕಿಂತ ಮುಂಚಿತವಾಗಿಯೇ ನೀರನ್ನು ಕುಡಿಯಬೇಕು. ನಮ್ಮ ಆಹಾರವು ಸರಿಯಾಗಿ ಜೀರ್ಣವಾಗಲು ನೀರು ಮಹತ್ವದ್ದಾಗಿದೆ. ಫ್ರಿಜ್ ನೀರು– ಅತೀ ಬಿಸಿಯಾದ ನೀರನ್ನು ಕುಡಿಯುವುದು ಬೇಡ ಎಂಬುದು ನೆನಪಿರಲಿ. ಕೈಗೆಟುವ ಕಡೆ ನೀರಿನ ಬಾಟಲಿ ಇಟ್ಟುಕೊಳ್ಳಬೇಕು. ಮೆದುಳು ಹೆಚ್ಚು ಕೆಲಸ ನಿರ್ವಹಿಸುವುದರಿಂದ 15–20ಗ್ಲಾಸ್ ಶುದ್ಧವಾದ ನೀರು ಕುಡಿಯಬೇಕು. ಇಲ್ಲದಿರೆ ಆಲಸ್ಯ ಉಂಟಾಗಿ ನಿದ್ರೆ ಬರುತ್ತದೆ.

### ನಿದ್ರಾದೇವಿ :–

ದಿನವಿಡಿ ದುಡಿದ ದೇಹಕ್ಕೆ ನಿದ್ರೆ ಅಗತ್ಯವಾಗಿ ಬೇಕು. ಅದರಿಂದ ಮೆದುಳು ಹೆಚ್ಚು ಉಲ್ಲಸಿತವಾಗುತ್ತದೆ. ಮನಸ್ಸು ಪ್ರಶಾಂತವಾದ ಕೊಳದಂತಾಗುತ್ತದೆ. ಅನೇಕರು ನಿದ್ದೆಗೆಟ್ಟು ಓದುತ್ತಾರೆ. ಆದರೆ ಅವರ ಮೆದುಳು ಸರಿಯಾಗಿ ಸ್ಪಂದಿಸುವುದಿಲ್ಲ. ಅದಕ್ಕೆ ನಾನು ಎಷ್ಟು ಓದಿದರೂ ನನ್ನ ತಲೆಗೆ ಹತ್ತುತ್ತಿಲ್ಲ ಎಂದು ಹೇಳುತ್ತಿರುತ್ತಾರೆ. ಮೆದುಳಿಗೆ ಸರಿಯಾದ ವಿರಾಮ ದೊರೆಯದಿದ್ದಲ್ಲಿ ಯಾವ ಪ್ರಯೋಜನವೂ ಇಲ್ಲ. ಪರೀಕ್ಷಾ ಸಮಯದಲ್ಲಿ ದಿನಕ್ಕೆ ಏಳು ಗಂಟೆ ನಿದ್ದೆ ಮಾಡಬೇಕು. ರಾತ್ರಿ 11ರಿಂದ ಬೆಳಗಿನ 5 ಗಂಟೆವರೆಗೆ, ಮಧ್ಯಾಹ್ನದ ಅವಧಿ ಒಂದು ಗಂಟೆ ಮೆದುಳಿಗೆ ವಿಶ್ರಾಂತಿ ಕೊಡುವುದು ಸೂಕ್ತ.

### ಯಶಸ್ಸು ಅಂಗೈಲಿ :–

ತಲೆಯಲ್ಲಿ ಬರುವ ನಕಾರಾತ್ಮಕ ಅಂಶಗಳಿಗೆ ಮೊದಲು ತಡೆಯೊಡ್ಡಬೇಕು. ಯಾವುದರ ಕುರಿತು ಹೆಚ್ಚು ಆಲೋಚಿಸುತ್ತೆವೆಯೋ ಅದೇ ರೀತಿ ಆಗುತ್ತದೆ. ಅದಕ್ಕೆ ನನ್ನಲ್ಲಿ ನೆನಪಿನ ಶಕ್ತಿ ಹೆಚ್ಚಾಗುತ್ತಿದೆ ಎಂಬ ಭಾವನೆ ಹೆಚ್ಚು ಸಬಲರನ್ನಾಗಿಸುತ್ತದೆ. ಮನಸ್ಸಿಗೆ ಯಾವುದೇ ಒತ್ತಡ ಹೇರುವುದು ಬೇಡ. ತದೇಕ ಚಿತ್ತದಿಂದ ಓದಿದರೆ ಮೆದುಳಿನ ನೆನಪಿನ ಮೂಲವು ಜಾಗ್ರತಗೊಂಡು ಜ್ಞಾಪಕ ಶಕ್ತಿ ವೃದ್ಧಿಸುತ್ತದೆ. ಅದರಿಂದ ಆತ್ಮವಿಶ್ವಾಸ ಗಟ್ಟಿಯಾಗುತ್ತದೆ. ಅದು ಅಪ್ಪ–ಅಮ್ಮ, ಶಿಕ್ಷಕರ ಕೈಲಿಲ್ಲ. ನಿಮ್ಮ ಅಂಗೈಲಿದೆ.

ಪರೀಕ್ಷೆ ಎಂದಾಗ ಮೊದಲು ಹೆದರಬಾರದು. ಹೆದರಿದಾಗ ಮೆದುಳು ಸಮರ್ಪಕವಾಗಿ ಕೆಲಸ ನಿರ್ವಹಿಸುವುದಿಲ್ಲ. ಕೆಲವರಿಗೆ ಆಂಗ್ಲಭಾಷೆ, ಗಣಿತ, ವಿಜ್ಞಾನ ಈ ರೀತಿ ಯಾವುದೋ ಒಂದು ವಿಷಯ ಕಠಿಣವಾಗಿರುತ್ತದೆ. ಅವರು ಅದನ್ನು ಎಲ್ಲಾ ವಿಷಯಗಳಿಗೂ ಅನ್ವಯಿಸಿಕೊಳ್ಳುತ್ತಾರೆ. ಅದರಿಂದ ಎಲ್ಲಾ ವಿಷಯಗಳು ಕಬ್ಬಿಣದ ಕಡಲೆಯಂತಾಗುತ್ತವೆ. ಅದರ ಬದಲು ಆ ವಿಷಯ ಮಾತ್ರ ಕಠಿಣ ವೆನಿಸುತ್ತಿದೆ. ಅದಕ್ಕೆ ಹೆಚ್ಚಿನ ಒತ್ತು ನೀಡಿ, ಇತರರ ನೆರವು, ಅಧ್ಯಯನದ ವಿಧಾನ ಬದಲಾವಣೆ ಮಾಡಿಕೊಂಡಲ್ಲಿ ಅದು ಕೂಡಾ ಸರಳವಾಗುತ್ತದೆ. ಯಾರಲ್ಲಿ ಸಂತಸ, ವಿಶ್ವಾಸ, ಧೈರ್ಯವಿರುತ್ತದೋ ಅವರು ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ. ಇವುಗಳನ್ನು ಸಂಪಾದಿಸಬೇಕಾದರೆ ನಿರಂತರ ಅಭ್ಯಾಸ, ಓದಿನತ್ತ ಒಲವು, ನಿರ್ದಿಷ್ಠ ಗುರಿ ಹೊಂದಿರಬೇಕು. ಮಾನಸಿಕವಾಗಿ ಧೃಢರಾಗಲು ಯೋಗಾಸನ ಮತ್ತು ಧ್ಯಾನ, ಪ್ರಾಣಾಯಾಮಗಳನ್ನು ಮಾಡುವುದೊಳಿತು.

ಪರೀಕ್ಷೆ ದಿನದಂದು ಹೆಚ್ಚು ಸಂತಸದಿಂದಿರಬೇಕು. ಅಲ್ಲಿಯವರೆಗೂ ವಿಧ್ಯಾರ್ಥಿಗಳು ತಮ್ಮ ಓದಿನ ಫಲ ಕೊಡುವ ದಿನವದು ಎಂದು ಭಾವಿಸಬೇಕು. ಶ್ರಮಕ್ಕೆ ತಕ್ಕ ಪ್ರತಿಫಲ ದೊಕುವುದರಲ್ಲಿ ಅನುಮಾನವಿಲ್ಲ. ಪರೀಕ್ಷೆ ಕೆಲ ಸಮಯದ ಮುಂಚೆ ಯೋಚಿಸುವುದು, ಓದುವುದು ಮಾಡಲೇ ಬಾರದು. ಹಾಗೆ ಮಾಡಿದಾಗ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ನೆನಪಾಗದಿದ್ದರೆ ಆತಂಕಕ್ಕೆ ಒಳಗಾಗಿ, ಉಳಿದವು ಮರೆಯಾಗುತ್ತವೆ. ಹಾಗಾಗಿ ಸಂತಸದಿಂದ ಪರೀಕ್ಷಾ ಕೊಠಡಿಗೆ ಪ್ರವೇಶಿಸು, ಉತ್ಸಾಹದಿಂದ ಪರೀಕ್ಷೆ ಎದುರಿಸಿದರೆ ಜಯ ಕಟ್ಟಿಟ್ಟ ಬುತ್ತಿ.

Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.
WE ARE OPEN for Every Function
V N Royal Garden Function Hall



Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217

ಕವಿ ಮನಸು

## ಮನದ ತುಡಿತ



ಎಳವೆಯಲ್ಲಿ ಬಂದ ಕಲೆಯು
ಕೊನೆಯ ತನಕ ಮರೆಯದು
ಬದುಕಿನಲ್ಲಿ ಬವಣೆ ಬರಲು
ಕೊಂಚ ಮರೆಗೆ ಸರಿವುದು

ಸಮಯ ಬರಲು ಸ್ಫೂರ್ತಿ ಸಿಗಲು
ಬರಿದೆ ಸುಮ್ಮನಾಗದು
ಮನದ ಒಳಗೆ ತುಡಿತ ಹೆಚ್ಚಿ
ಕಲೆಯು ಹೊರಗೆ ಬರುವುದು

ವೃದ್ಧೆ ಈಕೆ ಬದುಕಿನಲ್ಲಿ
ಕಾಡುತಿರಲು ಬಡತನ
ಬಳಗಕಾಗಿ ದುಡಿಯುತಿರಲು
ಬೆಳೆಸಲೆಂತು ಕಲೆಯನ

ಶುದ್ಧವಾದ ಗುಡಿಯ ಗೋಡೆ
ಹಚ್ಚೆ ಬಣ್ಣ ಕೇಸರಿ
ಕಾಣುತಿರಲು ಅವಿತ ವಿದ್ಯೆ
ಹೊರಗೆ ಧುಮುಕೊ ವೈಖರಿ

ಚಿತ್ರ ಬರೆವ ಬಯಕೆ ಬರಲು
ದೊರಕಿತಾಗ ಪರಿಕರ
ಗೋಡೆಯಲ್ಲಿ ಬರೆದ ಚಿತ್ರ
ನೋಡಲೆನಿತು ಸುಂದರ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಬಾಗಿದ ಅನ್ನವೇ ದೇವರಿಗೆ ನೈವೇದ್ಯ

"ತೆನೆ ಬಿಟ್ಟ ಫಸಲು ಬಾಗುವುದು,
ಫಲ ಬಿಟ್ಟ ಬಾಳೆಗೊನೆ ಬಿಟ್ಟ ಬಾಗುವುದು"
"ಆದರೆ ಏನನ್ನೂ ಕೊಡದ ಮನುಷ್ಯ ಮಾತ್ರ, ಸಮಸ್ತವೂ ತನ್ನ ಸೃಷ್ಟಿ ಎಂದು ಬೀಗುವನು"

ನಮ್ಮ ಹಿರಿಯರ ನುಡಿಯಾದ ಈ ವಾಕ್ಯಗಳು ಎಷ್ಟು ಅರ್ಥಗರ್ಭಿತವಾಗಿವೆ. ಹಾಗಾಯೇ ಬಾಗಿದ ಅನ್ನವೇ ದೇವರಿಗೆ ನೈವೇದ್ಯವಾಗಿ ಸಲ್ಲುವುದು. ಪೂಜ್ಯನೀಯವಾಗುವುದು. ಅದರಂತೆ, ಕದಳಿ ಫಲವೂ ಪೂಜ್ಯನೀಯ ಸ್ವರೂಪವೇ ಆಗಿದೆ. ದೇವರಿಗೆ ಶ್ರೇಷ್ಠ ಪ್ರಸಾದಗಳೇ ಆಗಿವೆ, ಅನ್ನದ ವಿವಿಧ ಭಕ್ಷ್ಯಗಳು ಮತ್ತೂ ಬಾಳೆಯ ಫಲ. ಬೀಗುವುದಕ್ಕಿಂತ ಬಾಗಿ ನಡೆದರೆ, ಎಲ್ಲವನ್ನೂ ಗೌರವದಿಂದ ಕಂಡರೆ ನಮಗೂ ಗೌರವ ಸಿಗುವುದೆಂದು, "ಭತ್ತ" ನಮಗೆ ಸೂಚ್ಯವಾಗಿ ಹೇಳುವುದು. ಇದಕ್ಕಾಗಿ "ಅನ್ನವನ್ನು ಪರಬ್ರಹ್ಮ ಸ್ವರೂಪ"ಎನ್ನುವೆವು. ಎಲ್ಲದಕ್ಕಿಂತ ಶ್ರೇಷ್ಠ ಎಂದು, ಅನ್ನಪೂರ್ಣೇಶ್ವರಿ ಸ್ವರೂಪ, ದೇವರ ರೂಪ ಎಂದೇ ಪರಿಭಾವಿಸಿ ಸೇವಿಸುವಂತೆ ತಿಳಿಸಿದ, ಶ್ರೇಷ್ಠ ಭಾರತೀಯ ಸಂಸ್ಕೃತಿ ನಮ್ಮದು. ಹಸಿವರಿಗೆ ಮಾತ್ರ, ಗೊತ್ತು ಅನ್ನದ ಬೆಲೆ. ಹಸಿದಾಗಲೇ, ಊಟ ಮಾಡಲೇ ಬೇಕಾದಾಗ, ಅದರ ಮಹತ್ವ ತಿಳಿಯುವುದು

ವಿಪರೀತ ಹಸಿದು, ಉಂಡಾಗ ಆಗುವ ಸಮಾಧಾನ ಇದೆಯಲ್ಲಾ!! ಅದು ಎಷ್ಟು ಕೋಟಿ ಕೊಟ್ಟರೂ, ಸುಲಭಕ್ಕೆ ಸಿಕ್ಕದ ಸಂತೃಪ್ತಿ. ಪ್ರರಬ್ರಹ್ಮ ಸ್ವರೂಪವೇ ಆಗಿದೆ. ಈ ಪರಬ್ರಹ್ಮ ಸ್ವರೂಪದ ನೈಜ ದರ್ಶನ "ಕರೋನಾ ಸಾಂಕ್ರಾಮಿಕ ಕಾಲದಲ್ಲಾದ , ಲಾಕ್ ಡೌನ್ ಸಂದರ್ಭದಲ್ಲಿ ನಮಗಾಗಿದೆ. ಆಗ ಮೊದಲು ಯಾವುದೂ ಐಷಾರಾಮಿ ವಸ್ತು ಬೇಕಾಗಿರಲಿಲ್ಲ. ಬೇಕಾಗಿದುದು ಅನ್ನ ಮಾತ್ರ. ಮುಂದೆ ದವಸ ಧಾನ್ಯ ಸಿಗದೇ ಹೋದರೆಂಬ!?? ಪ್ರಶ್ನೆಯಿಂದ, ಎಲ್ಲಾ ವರ್ಗದವರೂ ಸಂಗ್ರಹಿಸಿದ್ದು, ಆಹಾರ ಧಾನ್ಯ,

ತರಕಾರಿಗಳಷ್ಟೇ. ಬೇರೆಲ್ಲಾ ನಗಣ್ಯವಾಗಿತ್ತು ಆಗ.

ಅನ್ನ ಎಂದರೆ,ಇಲ್ಲಿ "ಆಹಾರ" ಎಂದರ್ಥ. "ಪ್ರತಿಯೊಂದು ಕಾಳಿನ ಮೇಲೂ ಉಣ್ಣುವವರ ಹೆಸರು ಬರೆದಿರುವುದಂತೆ". ಅದು ನಿಜವೂ ಸಹ. ಎಲ್ಲಿಯಾದರೂ ಹೋದಾಗ, ಸಿಕ್ಕುವ ದಿಡೀರ್ ಆತಿಥ್ಯ, ಹಸಿವಾದಾಗ ಒದಗುವ ಆಹಾರ. ಪ್ರವಾಸಿ ಸ್ಥಳಕ್ಕೆ ಹೋದಾಗ ಮಾಡುವ ಊಟ, ನಮ್ಮ ಹೆಸರಿನದೇ ಆಗಿರುವುದು. "ಎಲ್ಲಾರೂ ಮಾಡುವುದು ಹೊಟ್ಟೆಗಾಗಿ,ಗೇಣು ಬಟ್ಟೆಗಾಗಿ"ಎನ್ನುವಂತೆ, ನಾವು ದುಡಿಯುವುದೇ, ಹೊಟ್ಟೆಪಾಡಿಗಾಗಿ. ಆರಾಮವಾಗಿ ಕೂತು ಉಣ್ಣುವುದಕ್ಕಾಗಿ. ಕಷ್ಟಪಡುವುದು, ನಮ್ಮ ಜೀವನಕ್ಕಾಗಿ.

ಎಷ್ಟೇ ಹಣವಂತರಾದರೂ, ಬಡವರಾದರೂ ಸೇವಿಸುವುದೇ ಅನ್ನ. ನಮ್ಮ ಹತ್ತಿರ ಸಾಕಷ್ಟು ದುಡ್ಡಿದೆ ಅಂತ, ದುಡ್ಡನ್ನೇ ತಿನ್ನಲಾಗುವುದಿಲ್ಲ. ಆಹಾರವನ್ನೇ ಸೇವಿಸಬೇಕು. ಇದಕ್ಕಾಗಿ ನಮ್ಮ ಪೂರ್ವಿಕರು ಚಂದದ ವಾಸ್ತವಿಕವೂ ಆಗಿರಬಹುದಾದ, ಕಥೆಯನ್ನೇ ಹೇಳಿದ್ದಾರೆ. ಚಿಕ್ಕಂದಿನಿಂದಲೂ ಎಲ್ಲರೂ ಕೇಳಿರಬಹುದಾದ ಈ ಕಥೆ, ಅಂದಿಗೂ ಎಂದಿಗೂ, ಪ್ರಸ್ತುತ. ನನಗೂ, ಎಲ್ಲರಿಗೂ ಅನ್ವಯವಾಗುವಂಥಹುದೇ.

"ಮೈದಾಸನೆಂಬ ರಾಜ, ತಾನು ಮುಟ್ಟಿದ್ದೆಲ್ಲವೂ ಚಿನ್ನವಾಗಬೇಕೆಂಬ ವರ ಪಡೆದಿದ್ದ. ಅವನು ಯಾವುದನ್ನು ಮುಟ್ಟುವನೋ ಅದು, ಚಿನ್ನವಾಗಿ ಪರಿವರ್ತಿತವಾಗುತ್ತಿತ್ತು. ತನ್ನ ಅರಮನೆ, ಕುರ್ಚಿ,

ಟೇಬಲ್ಲುನ್ನೂ ಚಿನ್ನವಾಗಿಸಿದ. ವಿಪರೀತ ಹಸಿವೆಯಾಗಿ ಊಟಕ್ಕೆ ಕುಳಿತಾಗ ತಟ್ಟೆ, ಚಮಚವೂ ಚಿನ್ನದೇ ಆಯಿತು. ಕೊನೆಗೆ ಕೈಲಿ ತಿನ್ನೋಣವೆಂದು, ಅನ್ನಕ್ಕೆ ಕೈ ಹಾಕಿದರೆ, ಅನ್ನದ ಜಾಗದಲ್ಲಿ, ಚಿನ್ನದ ಅನ್ನದ ಅಗುಳುಗಳು. ಗೋಳಾಡಿದ. ಏನೇ ಮಾಡಿದರೂ,

ಪರಿವರ್ತಿತವಾಗಲು ಸಾಧ್ಯವೇ!? ಕೊನೆಗೆ ಬುದ್ಧಿ ಬಂದು, ಪಶ್ಚಾತಾಪದಿಂದ ಬೆಂದು, ಸಿಕ್ಕ ವರವನ್ನು ಹಿಂತಿರುಗಿಸಿ ಬಿಡುವನು. "ಕೊನೆಗೆ ಅವನಿಗೆ ಅನ್ನವೇ ಶ್ರೇಷ್ಠ. ಅನ್ನದಿಂದಲೇ ಹಸಿವೆ ಇಂಗಿಸಲು ಸಾಧ್ಯವೇ ಹೊರತು, ಚಿನ್ನದಿಂದಲ್ಲ ಎಂದ ಅರಿವಾಯಿತು."

ನಮಗೆ ಪ್ರವಾಸ ಹೋದಾಗ, ರಾತ್ರಿ ಪ್ರಯಾಣಿಸುವಾಗ ಒಂದಲ್ಲಾ ಒಂದು ಬಾರಿಯಾದರೂ, ಅನುಭವ ಆಗಿಯೇ ಇರುವುದು. 'ಬೇರೆಡೆ ಊಟ ಮಾಡೋಣ, ಇಲ್ಲಿ ಬೇಡ, ಅಲ್ಲಿ ಬೇಡ' ಎಂದು, ಇರುವೆಡೆ ಬಿಟ್ಟು, ಮುಂದೆ ಮುಂದೆ ಸಾಗುವಾಗಲೇ ಗೊತ್ತಾಗುವುದು. ಮುಂದೆ ಯಾವುದೇ ಪ್ರಸಿದ್ಧ ಹೊಟೆಲ್ ತೆರೆದಿರುವುದಿಲ್ಲ, ಅಥವಾ ಇರುವುದೇ ಇಲ್ಲ. ಅಂತಹ ಸಮಯ,ಬಹುತೇಕರಿಗೆ ಅನ್ನ ಕೊಡುವ, ಅನ್ನಪೂರ್ಣೇಶ್ವರಿ ರೂಪದಲ್ಲಿ, ಕಾಣಿಸುವುದೇ ಕ್ಯಾಂಟೀನ್ ಮಾದರಿಗಳು, ತಳ್ಳುಗಾಡಿ ಮಾದರಿಗಳೇ ಹಸಿವೆ ತಣಿಸುವುದು. ತಡರಾತ್ರಿಯವರೆಗೂ, ಹಾದಿಹೋಕರ ಹಸಿವೆ ತಣಿಸುವ,



ಅಂತಹವರಿಗೆ ಗೌರವಿಸೋಣ.

ನಾವು ಎಷ್ಟೋ ಬಾರಿ ತಿನ್ನುವ ಭರದಲ್ಲಿ, ಆಹಾರವನ್ನು ವ್ಯರ್ಥ ಮಾಡಿರುತ್ತೇವೆ.

ಮದುವೆ ಮನೆ, ಬರ್ತ್ ಡೇ ಪಾರ್ಟಿ, ಸಮಾರಂಭ, ದೇವಸ್ಥಾನದ ದಾಸೋಹಗಳಲ್ಲಿ ತಿನ್ನುವುದಕ್ಕಿಂತ ಅಧಿಕ ಆಹಾರ ಪೋಲಾಗುವುದನ್ನು ಕಂಡಿರುತ್ತೇವೆ. ಇದು ಬಫೆ ಅಥವಾ ಬಫೆಟ್ ಗಳಲ್ಲಿಯೇ ಅಧಿಕ. ಆಗ ಜಾಣ ಕುರುಡರಂತೆಯೇ ನಮ್ಮಗಳ ವರ್ತನೆ ಇರುವುದು. "ಹೇಳಿದರೆ ಯಾವ ಪರಿಣಾಮ ಅನುಭವಿಸಬೇಕಾಗುವುದೆಂಬ ಹಿಂಜರಿಕೆ.

ಹೇಳದಿದ್ದರೆ, ಇಷ್ಟೇಲ್ಲಾ ಆಹಾರ ಪೋಲಾಗುವುದಕ್ಕೆ ಪರೋಕ್ಷವಾಗಿ ಕಾರಣರಾಗುತ್ತೇವೆಲ್ಲಾ ಸಂದಿಗ್ಧತೆ". ಅಲ್ಲಿ ಚೆಲ್ಲಿದ ರಾಶಿ ಆಹಾರ, ಎಷ್ಟೋ ಜನರ, ಹಸಿವೆಯನ್ನು ತಣಿಸುವ ಸಾಮರ್ಥ್ಯ ಹೊಂದಿದೆ. (ಕೆಲವು ಸಿನಿಮಾ ನೋಡಿದಾಗ,ಆಯ್ದುಕೊಂಡು ತಿನ್ನುವ ದೃಶ್ಯ ನೋಡಿದರೇನೇ ಕರುಳು ಹಿಂಡುವುದು) ಆ ರಾಶಿಯಿಂದ ಆಯ್ದುಕೊಳ್ಳುವ ಕೈಗಳು, ಮನಕಲಕುವಂತಿರುತ್ತದೆ. ಅಂತಹ ಸ್ಥಿತಿ ನಿಜಕ್ಕೂ ಬೇಡ.

ನಾವು ಅನ್ನ,– ಆಹಾರ ಬೆಳೆಯುವ ವಿಧಾನ ಸರಿಯಾಗಿ ಅರ್ಥೈಸಿಕೊಂಡರೆ, ಅನ್ನಾಹಾರವನ್ನು ಎಂದೂ ವ್ಯರ್ಥ ಮಾಡುವುದಿಲ್ಲ. ಕಾರಣ, ಅನ್ನದ ಮೂಲವಾದ, ಭತ್ತ ಇನ್ನಿತರ ಆಹಾರದ ಮೂಲವಾದ ರಾಗಿ, ಜೋಳ, ಇನ್ನಿತರ ಬೆಳೆ ಉತ್ತಿದರೆ, ತಕ್ಷಣಕ್ಕೆ ಬೆಳೆದುಬಿಡುವುದಿಲ್ಲ. ಅಥವಾ ಉತ್ತಿ–ಬಿತ್ತಿ ಅದಾಗೇ ಅದನ್ನು ಬಿಡುವಂತಿಲ್ಲ. ಅದಕ್ಕೆ ಹಲವಾರು ಪ್ರಕ್ರಿಯೆಗಳಿವೆ. ಹಲವು ಪ್ರಕ್ರಿಯೆಗೆ ಒಳಪಟ್ಟೇ, ಅನ್ನದ ರೂಪದಲ್ಲಿ ನಮ್ಮ ಹಸಿವೆ ತಣಿಸುವುದು. ಅದಕ್ಕೆ 6ರಿಂ7ತಿಂಗಳ ಕಾಲ ಬೇಕು. ತೋಟ–ಗದ್ದೆ ಹದಮಾಡಿ, ಉತ್ತುವುದು. ನಂತರ ನಾಟಿ ಮಾಡಿ, ನೇಜಿ ಹಾಕುವುದು. ನಂತರ,"ಮಡಿ ಹಾಕುವುದು" ಅಂದರೆ ನಾಟಿ ಮಾಡುವುದು. ಕಾಲಕಾಲಕ್ಕೆ ಔಷಧೋಪಚಾರ. ನಂತರ, ಹಾಲ್ಗಾಳುಗಳು ಮೂಡುವುದು. ಹಾಲ್ಗಾಳು, ಬಲಿತ ಕಾಳುಗಳನ್ನು ಗಿಳಿ,ಪಕ್ಷಿಗಳಿಂದ, ಮಂಗಗಳಿಂದ ಕಾಪಾಡುವುದು ಮಾಡಬೇಕು. ಬಲಿತ ನಂತರ ಕೊಯ್ಲು. ಇದಕ್ಕೂ ಕೆಲಸಗಾರರನ್ನು ಹುಡಕಿ ಕೊಯ್ಯುವ ಕಾರ್ಯ. ಭತ್ತ, ರಾಗಿ , ಜೋಳ, ಶೆಂಗಾ, ಉದ್ದು,ಏಕ ದಳ, ದ್ವಿದಳಕಾಳುಗಳು, ಏನೇ ಇರಲಿ ಅದರ ಹೊಟ್ಟು,(,ಹುಲ್ಲು)ಒಂದೆಡೆ, ಕಾಳು ಒಂದೆಡೆ ಬೇರ್ಪಡಿಸಬೇಕು. ಏಕೆಂದರೆ ಅದು ಮೇವಾಗಿ ಮನೆಯಲ್ಲಿರುವ ಜಾನುವಾರುಗಳಿಗೆ ಬೇಕು. ನಂತರ ಮಾರುವುದು. ಕೃಷಿಕ ತನಗೆ,ತನ್ನ ಮನೆಗೆ ಬೇಕಾದಷ್ಟು ಉಳಿಸಿಕೊಂಡು ಮಾರಲು ಹೊರಡುವನು. ಅಲ್ಲೂ ಮಧ್ಯವರ್ತಿಗಳ ಹಾವಳಿಯಿಂದ,ಬೆಳೆ ಬೆಳೆದ ರೈತನಿಗೆ, ಬೆಳೆಗೂ ಸರಿಯಾದ ಬೆಲೆಯೂ ಸಿಗುವುದಿಲ್ಲ. ಸಿಕ್ಕಷ್ಟು ಬೆಲೆಗೆ ಮಾರುವನು. ಮಧ್ಯವರ್ತಿಗಳಿಂದ ಕಿರಾಣಿ ಅಂಗಡಿಗಳಿಗೆ . ಅಲ್ಲಿಂದ ಗ್ರಾಹಕರಾದ ನಮಗೆ,ತಲುಪಿದಾಗಲೇ, ಹೊಟ್ಟೆ ತಣಿಯುವುದು.

ಅನ್ನವನ್ನು ವ್ಯರ್ಥ ಮಾಡದಂತೆ, ಕೆಲವು ನಿಯಮ ಶಿಸ್ತು ಪಾಲಿಸಿದರೆ ವ್ಯರ್ಥವಾಗುವುದು ತಡೆಯಬಹುದು.

*ಬದಲಾವಣೆ ನಮ್ಮಿಂದಲೇ ಆಗಲಿ. ಬೇಕಾದಷ್ಟು ಮಾತ್ರವೇ ಬಡಿಸಿಕೊಂಡು, ಒಂಚೂರು ಬಿಡದಂತೆ ಸೇವಿಸುವ ದೃಡ ಸಂಕಲ್ಪ ನಮಗಿರಬೇಕು.

*ಮನೆಯ ಸಮಾರಂಭಗಳಲ್ಲಿ, ಬಫೆಟ್ ಬದಲಿಗೆ, ಎಲ್ಲರಿಗೂ ಪಂಕ್ತಿ ಊಟ ಹಾಕಿದರೆ, ಅಲ್ಲಿ ಪೋಲಾಗುವುದು ನಿಲ್ಲುವುದು. ಕೆಲವೊಮ್ಮೆ ಸಮಯವೂ ಮುಖ್ಯ, ಅದರ ಜೊತೆಗೆ ಒಂದಗುಳೂ ಮುಖ್ಯ ಎಂಬುದನ್ನು ಮನಗಾಣಬೇಕು.

*ಸಮಾರಂಭದಲ್ಲಿ,ಎಲ್ಲಾ ರೀತಿಯ, ಎಲ್ಲಾ ಪ್ರಕಾರದ ಅಡುಗೆ ಈಗ ಸಾಮಾನ್ಯ. ಎಲ್ಲವನ್ನೂ ರುಚಿ ನೋಡುವ ಭರದಲ್ಲಿ, ಹಾಕಿಸಿಕೊಂಡು,ಹಾಗೆ ಹಾಗೆಯೇ ತಿನ್ನದೇ ಬಿಡುವುದಕ್ಕಿಂತ, ಎಷ್ಟು ಬೇಕೋ, ಯಾವುದು ಬೇಕೋ ಅದನ್ನು ಮಾತ್ರ ಹಾಕಿಸಿಕೊಳ್ಳುವ ಅಭ್ಯಾಸದಿಂದ ಪೋಲಾಗುವದು ತಡೆಯಬಹುದು.

*ಹಲವರಿಗೆ ತಟ್ಟೆಯಲ್ಲಿ ಒಂದೆರಡು ತುತ್ತು ಬಿಟ್ಟೇ ಬಿಡುವರು. "ಹೆಚ್ಚು ಬಿಟ್ಟರೆ"ಮಾತ್ರ ಪ್ರತಿಷ್ಟೆ ಎಂಬ ಒಣ ಭಾವನೆ ಇರುವುದು. ಅದು ಮೊದಲು ಹೋಗಬೇಕು.

*ಅನಿವಾರ್ಯ, ಕೆಲವು ಸಂಧರ್ಭದಲ್ಲಿ ಊಟ ಬಡಿಸಿಕೊಂಡು, ಅಲ್ಲಿ ಇಲ್ಲಿ ಓಡಾಡಿಕೊಂಡು ತಿನ್ನುವುದಕ್ಕಿಂತ,ಒಂದೆಡೆ ಕುಳಿತೇ ತಿನ್ನಬೇಕು.

*ಮನೆಯಲ್ಲೂ ಹೆಚ್ಚು ಹೆಚ್ಚು ಅಡುಗೆ ಮಾಡಿ, ಹಾಗೆಯೇ ಉಳಿಸಿ, ಉಣ್ಣದೇ ಬಿಸಾಡುವುದಕ್ಕಿಂತ ಎಷ್ಟು ಬೇಕೋ ಅಷ್ಟು ಮಾಡುವುದು. ದಿನವೂ ಉಣ್ಣುವ ಸಾಮರ್ಥ್ಯವಂತೂ ತಿಳಿದೇ ಇರುವುದು.

*ಸೇವಿಸಲು ಸಾಧ್ಯವಾಗದ ಆಹಾರವನ್ನು ಕೊಡುವುದಕ್ಕಿಂತ, ,ಸೇವಿಸಲು ಯೋಗ್ಯ ಆಹಾರವನ್ನು ನೀಡಿದರೆ, ಅವರ ಹಸಿವೂ ತಣಿಯುವುದು.

"ಮನುಜ ಏನೇ ಕೊಟ್ಟರೂ ಸಹ, ಇನ್ನೂ ಬೇಕು, ಮತ್ತಷ್ಟು ತನ್ನ ಬಳಿ ಇರಬೇಕೆಂಬುದು ಸಹಜ ಆಸೆ. ಆದರೆ ಅನ್ನಾಹಾರ ಕೊಟ್ಟರೆ,ಹೊಟ್ಟೆ ತುಂಬಿದ ತಕ್ಷಣವೇ ಸಾಕು ಎಂದುಬಿಡುವನು. "ಹಾಗಾಗಿ ಸಹಾಯ ಕೇಳಿಕೊಂಡು ಮನೆಗೆ ಮುಂದೆ ಬರುವವರಿಗೆ,ಹಣ ಕೊಡುವ ಬದಲಿ, ಊಟ ಕೊಟ್ಟರೆ, ಅವರ ಹಸಿವೆಯೂ ಹಿಂಗುವುದು. ಖೇದಕರ ಎಂದರೆ,ಈಗೀಗ ಯಾರಿಗೂ ಆಹಾರ ಪದಾರ್ಥ ತೆಗೆದುಕೊಳ್ಳುವುದಿಲ್ಲ. ಹಣವೇ ಬೇಕು ಅವರಿಗೆ.

ಇಂದು ಹಸಿವೆಯಿಂದ ಬಳಲುವವರ ಸಂಖ್ಯೆ ನಮಗೆ ಗೊತ್ತಿಲ್ಲದೇ ದೊಡ್ಡದಿದೆ. ಇದಕ್ಕೆ ಸಾಕ್ಷಿ ಎಂದರೆ, ನಗರದ ತೊಟ್ಟಿಗಳ ಹತ್ತಿರ ಹೋದರೂ ಸಾಕು, ಅದರ ಅಂದಾಜು ನಮಗಾಗುವುದು.(ಹಳ್ಳಿಗಳಲ್ಲಾದರೆ ಮುಸುರೆ ತೊಟ್ಟಿ ಇದ್ದು,ದನಕರುಗಳಿಗೆ ಕಲ್ಗಚ್ಚು ಆಗುವುದು,)

ಒಂದು ಹಿಡಿ ಅನ್ನಕ್ಕಾಗಿ ಕಾಯುವ ಜನವೆಷ್ಟೋ!? ,ಒಂದು ಹಿಡಿ ಅನ್ನಕ್ಕಾಗಿ ಹಗಲು,–ರಾತ್ರಿ ಕಷ್ಟ ಒಡುವ ಶ್ರಮಿಕವರ್ಗವೆಷ್ಟೋ!? ಒಂದು ಹಿಡಿ ಅನ್ನವಾಗಿ ರೂಪುಗೊಳ್ಳಲು ಬೇಕಾಗುವ ಸಮಯವೆಷ್ಟೋ!? ಒಂದು ಬಾರಿ ಚಿಂತನೆಗೆ ಒಳಪಡಿಸಿಕೊಂಡರೂ ಸಾಕು.

"ರೈತ ಒಕ್ಕದಿದ್ದರೆ, ಬಿಕ್ಕುವುದು ಜಗವೆಲ್ಲಾ" ಎನ್ನುವಂತೆ, ಭೂಮ್ತಾಯಿಯ ಆಶೀರ್ವಾದ, ರೈತರ ಪರಿಶ್ರಮದಿಂದ,ಬೆಳೆದ ಅನ್ನವನ್ನು ನಾವು ಗೌರವಿಸಿ ಸೇವಿಸೋಣ.

ಹಾಗಾಗಿಯೇ "ಅನ್ನಪೂರ್ಣೆ ಸದಾ ಪೂರ್ಣೆ, ಶಂಕರ ಪ್ರಾಣವಲ್ಲಭೆ, ಜ್ಞಾನ ವೈರಾಗ್ಯ ಸಿದ್ಧ್ಯರ್ಥಂ, ಭಿಕ್ಷಾಂ ದೇಹಿ ಚ ಪಾರ್ವತಿ" ಎಂದು ಹೇಳಿರುವುದು. "ಪ್ರಾಣಮೂಲವಾದ ಅನ್ನವು ಅನ್ನಪೂರ್ಣೇಶ್ವರಿಯ ದಯೆ, ಅದನ್ನು ಸೇವಿಸುವಾಗ, ಯಾವುದೇ ಮಾತು ಬೇಡ, ದೇವರ ಸ್ಮರಣೆ ಮಾಡೋಣ"ಎಂಬರ್ಥ ಇರುವುದಕ್ಕಾಗಿಯೇ ಶಾಲೆಯಲ್ಲಿ ದಿನವೂ ಪ್ರಾರ್ಥನೆಯ ಮೂಲಕ ಅರಿವು ಮೂಡಿಸುತ್ತಿರುವುದು.ಅದು ನಮ್ಮ ಪ್ರತಿ ಮನೆ ಮನೆಯಲ್ಲೂ ಪುನರಪಿಯಾಗಬೇಕು.



ಲೀಲಾವತಿ ಶಿವನಗೌಡ್ರು,
ಅಂಕಸಮುದ್ರ, ಹ.ಬೊ,ಹಳ್ಳಿ

Scan For Digital Colourful
HAMPI TIMES E-paper

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

# ಮೈ ಮನಗಳ ಕೊಳೆ ಕಳೆಯಿತು

ಗಾಯತ್ರಿಯವರು ಆ ದಿನ ತುಸು ತಡವಾಗಿಯೇ ಎದ್ದರು. ಕಳೆದ ಎರಡು ದಿನಗಳಿಂದ ಮೊಳಕಾಲಿನ ಹಿಂಭಾಗದ ಮಡಿಕೆಯಲ್ಲಿ ಉಂಟಾದ ಪುಟ್ಟದೊಂದು ಗುಳ್ಳೆ ಇದೀಗ ತನ್ನ ವಿಶ್ವರೂಪವನ್ನು ತೋರಿಸುತ್ತಿತ್ತು. ಸಣ್ಣ ಗುಳ್ಳೆಯ ಸುತ್ತಲ ಚರ್ಮ ಬಿಗಿದು ಕೆಂಪಾಗಿದ್ದರೂ ಗಟ್ಟಿಯಾಗಿದ್ದು ಕುರುವಿನ ಎಲ್ಲ ಲಕ್ಷಣಗಳನ್ನು ತೋರಿಸುತ್ತ ಒಂದೇ ಸಮನೆ ಸೆಳೆತವನ್ನು ಉಂಟುಮಾಡುತ್ತಿತ್ತು. ವೈದ್ಯರು ನೀಡಿದ ಮಾತ್ರೆಗಳು ತಾತ್ಕಾಲಿಕ ಉಪಶಮನವನ್ನು ನೀಡಿದ್ದವೇನೋ ಸರಿ... ಆದರೆ ಪ್ರತಿ ಬಾರಿ ಕುಳಿತು ಏಳುವಾಗ, ನಡೆಯುವಾಗ ಗುಳ್ಳೆಯ ಸುತ್ತಲಿನ ಚರ್ಮ ಬಿಗಿಯುತ್ತಿದ್ದ ಕಾರಣ ಹೆಜ್ಜೆ ಕಿತ್ತಿಡುವಾಗೊಮ್ಮೆ ಅಸಾಧ್ಯ ನೋವಾಗುತ್ತಿತ್ತು. ಆದ್ದರಿಂದಲೇ 'ಕುರುವಿನ ಮಹಿಮೆಯ ಗುರುವೇ ಬಲ್ಲ' ಎಂದು ಹೇಳುತ್ತಾರೆನೋ ಎಂದುಕೊಳ್ಳುತ್ತಾ ಗಾಯಿತ್ರಿ ಎರಡು ದಿನ ಕಳೆದರು. ಎರಡು ಕೈಗಳನ್ನುಜ್ಜಿ ಕಣ್ಣಿಗೆ ಒತ್ತಿಕೊಂಡು ನಮಸ್ಕರಿಸಿ ಎರಡು ಕೈಗಳನ್ನು ಅಗಲಿಸಿ ಅಂಗೈಯನ್ನು ನೋಡುತ್ತಾ 'ಕರಾಗ್ರೇ ವಸತೇ ಲಕ್ಷ್ಮಿ ' ಎಂದು ಮಂತ್ರವನ್ನು ಹೇಳಿಕೊಂಡರು. ನಂತರ ಬಚ್ಚಲಿಗೆ ತೆರಳಿ ಹಲ್ಲುಜ್ಜಿ, ಮುಖ ತೊಳೆದು ನಿಧಾನವಾಗಿ ಹೆಜ್ಜೆ ಇಡುತ್ತಾ, ಅಡುಗೆ ಮನೆಯತ್ತ ಬಂದರು.

ಈಗಾಗಲೇ ಎದ್ದು ಅಡುಗೆ ಮನೆಯ ಕೆಲಸಗಳಲ್ಲಿ ವ್ಯಸ್ತಳಾಗಿದ್ದ ಸೊಸೆ ತನ್ಮಯಿ ಬಿಸಿಯಾದ ಚಹಾವನ್ನು ಸೋಸಿ, ಕಪ್ಪನ್ನು ಅತ್ತೆಯ ಕೈಗಿಡುತ್ತಾ ಈಗ ನೋವು ಹೇಗಿದೆ ಎಂದು ವಿಚಾರಿಸಿದಳು. ಇದ್ದುದರಲ್ಲಿಯೇ ಕೊಂಚ ವಾಸಿ, ಕುರುವಿನ ಗಾಯ ಹಣ್ಣಾಗಿದ್ದು ಇನ್ನೇನು ಒಡೆದು ಅದರಲ್ಲಿ ತುಂಬಿಕೊಂಡಿರುವ ಹೊಲಸು ಹೊರಹೋದರೆ ಕಾಲಿನ ಸೆಳೆತ ಕಡಿಮೆಯಾಗಿ ಸಮಾಧಾನ ವಾಗಬಹುದೇನೋ ಎಂದು ಉತ್ತರಿಸಿದರು ಗಾಯತ್ರಿ.

ಅವರಿಬ್ಬರದು ಅನ್ಯೋನ್ಯ ಅತ್ತೆ ಸೊಸೆ ಜೋಡಿ. ಒಬ್ಬರು ತರಕಾರಿ ಹೆಚ್ಚಿದರೆ ಇನ್ನೊಬ್ಬರು ಒಗ್ಗರಣೆ ಹಾಕಿ ಒಬ್ಬರು ಚಪಾತಿ, ರೊಟ್ಟಿ ಮಾಡಿದರೆ ಮತ್ತೊಬ್ಬರು ಬೇಯಿಸಿಕೊಂಡು ಹೀಗೆ ಒಟ್ಟೊಟ್ಟಿಗೆ ತಿಂಡಿ ಅಡುಗೆಗಳನ್ನು ತಯಾರಿಸುತ್ತಾ ಮನೆಯ ಕೆಲಸಗಳನ್ನು ಮಾಡುತ್ತಿದ್ದರು.ಇಂಥದ್ದೇ ಕೆಲಸವನ್ನು ಇವರಿವರೆ ಮಾಡಬೇಕೆಂದು ಯಾವ ನಿಯಮಗಳನ್ನು ಹಾಕಿಕೊಳ್ಳದೆ ಪ್ರತಿದಿನ ಮುಂಜಾನೆ, ಮಧ್ಯಾಹ್ನ ಮತ್ತು ರಾತ್ರಿಯ ಅಡುಗೆಯನ್ನು ಅವರಿಬ್ಬರೂ ಜೊತೆಯಾಗಿ ತಯಾರಿಸುತ್ತಿದ್ದರು. ಮನೆಯ ಎಲ್ಲ ಸದಸ್ಯರು ಒಟ್ಟಾಗಿ ಊಟ ಮಾಡುತ್ತಿದ್ದರು.ಎಲ್ಲಾ ಕೆಲಸ ಮುಗಿದ ಮೇಲೆ ಅತ್ತೆ ಅಡುಗೆ ಕೋಣೆಯಿಂದ ಹೊರಗೆ ಬಂದರೆ ಸೊಸೆ ಅಡುಗೆ ಮನೆಯನ್ನು ಸ್ವಚ್ಛಗೊಳಿಸಿ ಹೊರ ಬರುತ್ತಿದ್ದಳು.

ಚಹಾ ಕುಡಿದ ಗಾಯತ್ರಿಯವರು ಸ್ನಾನ ಮಾಡಿ ಬರುವೆ ಎಂದು ಹೇಳಿ ಸ್ನಾನದ ಕೋಣೆಗೆ ತೆರಳಿ ಸ್ನಾನವನ್ನು ಪೂರೈಸಿ ಪೂಜೆ ಮಾಡಿ ಮತ್ತೆ ಅಡುಗೆ ಕೋಣೆಯತ್ತ ಬಂದಾಗ ಅದಾಗಲೇ ಸೊಸೆ ತನ್ಮಯಿ ತಿಂಡಿಯನ್ನು ತಯಾರಿಸಿ ಬೇರೊಂದು ಕೆಲಸದ ನಿಮಿತ್ತ ಹೊರಗೆ ಹೋಗಿದ್ದಳು. ಯಾವಾಗಲೂ ತನ್ನನ್ನು ಕೇಳಿಯೇ ತಿಂಡಿ ತಯಾರಿಸುತ್ತಿದ್ದ ಸೊಸೆ ಇಂದು ತಾನಾಗಿಯೇ ತಿಂಡಿ ಮಾಡಿದ್ದನ್ನು ಕಂಡು ಗಾಯಿತ್ರಿ ಅವರ ಮನ ಮುದುಡಿತು. ಸ್ವಲ್ಪ ಇರಿಸುಮುರಿಸು ಉಂಟಾಗಿ ಅಡುಗೆ ಕೋಣೆಯಿಂದ ಹೊರ ಬಂದು ಹಾಲಿನಲ್ಲಿ ಪೇಪರ್ ಓದುತ್ತಿದ್ದ ಪತಿಯ ಮುಂದೆ ಹೋಗಿ ಏನೂ ಮಾತನಾಡದೆ ಸುಮ್ಮನೆ ಕುಳಿತರು.



ಮುಂದೆ ಕೆಲ ಹೊತ್ತಿನಲ್ಲಿ ಎಲ್ಲರೂ ತಿಂಡಿ ತಿಂದು ತಂತಮ್ಮ ಕೆಲಸಗಳಿಗೆ ನಡೆದಾಗ ಗಾಯತ್ರಿ ನಿಧಾನವಾಗಿ ವರಾಂಡದೆಡೆ ನಡೆದರು. ಒಂದೆಡೆ ಕಾಲು ಸೆಳೆಯುತ್ತಿದ್ದರೆ ಮತ್ತೊಂದೆಡೆ ತಮಗೆ ಕೇಳದೆ ಸೊಸೆ ತಿಂಡಿ ಮಾಡಿದ್ದು ಇನ್ನೂ ಮನಸ್ಸಿನಲ್ಲಿ ಕೊರೆಯುತ್ತಿತ್ತು.

ಮನೆಯಲ್ಲಿ ಇಡ್ಲಿ, ದೋಸೆ, ಪೂರಿ, ಆಲೂ ಪರೋಟದಂತಹ ದೊಡ್ಡ ದೊಡ್ಡ ತಿಂಡಿಗಳನ್ನು ಮುಂಜಾನೆ ಸಮಯದಲ್ಲಿ ಮಾಡುವಾಗ ಅದಕ್ಕೆ ಮೊದಲೇ ತಯಾರಿ ಮಾಡಿಕೊಂಡಿರುತ್ತಿದ್ದರು. ಆ ರೀತಿ ಏನು ತಯಾರಿ ಮಾಡಿಕೊಂಡಿಲ್ಲದ ದಿನ ಕೇವಲ ಉಪ್ಪಿಟ್ಟು ಇಲ್ಲವೇ ಅವಲಕ್ಕಿಯನ್ನು ಮಾಡುತ್ತಿದ್ದರು. ಅಂತೆಯೇ ಏನು ಪೂರ್ವ ತಯಾರಿ ಇಲ್ಲದ ಇಂದು ಸೊಸೆ ಉಪ್ಪಿಟ್ಟನ್ನು ತಯಾರಿಸಿದ್ದಳು.

ನಿಧಾನವಾಗಿ ಯೋಚಿಸಲಾರಂಭಿಸಿದ ಗಾಯತ್ರಿಗೆ ಅಕಸ್ಮಾತ್ ಸೊಸೆ ತನ್ನನ್ನು ಕೇಳಿದ್ದರೆ ಏನೂ ತಯಾರಿ ಮಾಡಿಕೊಂಡಿರದ ಕಾರಣ ತಾನು ಮಾಡಲು ಹೇಳುತ್ತಿದ್ದುದಾದರೂ ಅವಲಕ್ಕಿ ಇಲ್ಲವೇ ಉಪ್ಪಿಟ್ಟು ತಾನೇ, ಅಂದಾಗ ಕೇಳದೆ ಮಾಡಿದ್ದು ಅಂತಹ ದೊಡ್ಡ ಪ್ರಮಾದವೇನಲ್ಲ. ಅಷ್ಟಕ್ಕೂ ತಾನು ತಡವಾಗಿಯೇ ಎದ್ದಿರುವುದರಿಂದ ದೈನಂದಿನ ಸಮಯಕ್ಕೆ ಸರಿಯಾಗಿ ಸೊಸೆ ತಿಂಡಿ ಮಾಡಿ ಇಟ್ಟಿರಬಹುದು ಎಂದು ಅಂದಾಜಿಸಿದಾಗ ಮನಸ್ಸು ಸಂಪೂರ್ಣವಾಗಿ ಸಮಾಧಾನಗೊಂಡಿತು. ಅಷ್ಟಕ್ಕೂ ಪ್ರತಿದಿನ ತಮ್ಮನ್ನು ಕೇಳಿ ಮಾಡಲೇಬೇಕೆಂಬ ಆಸೆಯನ್ನು ಇನ್ನು ಮೇಲೆ ತೊರೆಯಬೇಕು ಹೊಸ ಬಗೆಯ ಅಡುಗೆ ತಿಂಡಿಗಳನ್ನು ತಯಾರಿಸಿ ಎಲ್ಲರ ಮನ ಮೆಚ್ಚಿಸಬೇಕೆಂಬ ಆಶಯ, ಆಸೆ ಆಕೆಗೂ ಇರಬಹುದು ಎಂದು ಯೋಚಿಸಿದಾಗ ನಿಧಾನವಾಗಿ ಮನಸ್ಸಿನಲ್ಲಿ ಅವಿತಿದ್ದ ಕಸಿವಿಸಿ ಮಾಯವಾಗಲಾರಂಭಿಸಿತು.

ಅದೇ ಭರದಲ್ಲಿ ಕಾಲನ್ನು ಸರಿಸಲು ಹೋದ ಗಾಯತ್ರಿಯವರ ಕಾಲಿನ ಕುರು ಒಡೆದು ಅದರಲ್ಲಿರುವ ಕಸವೆಲ್ಲ ನಿಧಾನವಾಗಿ ಹೊರಗೆ ಒಸರಲಾರಂಭಿಸಿತು. ಕೂಡಲೇ ಸೊಸೆಯನ್ನು ಕೂಗಿ ಕರೆದ ಗಾಯತ್ರಿ ಅವರು ಕುರು ಒಡೆದುದನ್ನು ಹೇಳಿದಾಗ ತನ್ಮಯಿ ಫಸ್ಟ್ ಏಡ್ ಬಾಕ್ಸನ್ನು ತಂದು ಹತ್ತಿಯ ಅರಳೆಯಿಂದ ಕುರುವಿನಿಂದ ಹೊರ ಬರುತ್ತಿದ್ದ ಎಲ್ಲಾ ಹೊಲಸನ್ನು ತೆಗೆಯಲು ಅತ್ತೆಗೆ ಸಹಾಯ ಮಾಡಿದಳು. ಇದುವರೆಗೆ ಇದ್ದ ಕಾಲು ಸೆಳೆತ ಕುರು ಒಡೆದ ಪರಿಣಾಮವಾಗಿ ಕಡಿಮೆಯಾಗಿ ಕೆಲವೇ ನಿಮಿಷಗಳಲ್ಲಿ ಕಾಲು ನೋವಿನಿಂದ ಮುಕ್ತವಾಯಿತು.... ಅಂತೆಯೇ ತಮ್ಮದೇ ಮನಸ್ಸಿನ ಚಿಂತನ ಮಂಥನದ ಪರಿಣಾಮವಾಗಿ ಮನಸ್ಸಿನೊಳಗಿನ ಕಸಿವಿಸಿ ಎಲ್ಲಾ ಸೋರಿ ಹೋಗಿ ಮನಸ್ಸು ಕೂಡ ನಿರಾಳವಾಗಿ ತಲೆಯನ್ನು ಸೋಫಾಗೆ ಒರಗಿಸಿ ಕಣ್ಣು ಮುಚ್ಚಿದ ಗಾಯಿತ್ರಿ ಅವರ ತಿಳಿಯಾದ ಮನಸ್ಸು ಅಪಾರ ನೆಮ್ಮದಿಯನ್ನು ಕಂಡುಕೊಂಡಿತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper




## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**24-02-2024 – ಶನಿವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘಾ |
| ಯೋಗ | : ಅತಿಗಂಡ |
| ಕರಣ | : ಭವ |
| ಸೂರ್ಯೋದಯ | : 06.55.17 |
| ಸೂರ್ಯಾಸ್ತ | : 18:25:42 |
| ರಾಹು | : 11:14-14:40 |
| ಯಮಘಂಡ | : 15:33-16:59 |
| ಗುಳಿಕ | : 08:22-09:48 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ: 23-02-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.45 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 763 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.033 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.68 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 11172 ಕ್ಯುಸೆಕ್ |
| ಸಾಮರ್ಥ್ಯ | 33.233 ಟಿಎಂಸಿ |

## ಆಯವ್ಯಯ ಮಂಡನಾ ಸಭೆ ಫೆ.28ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ನಗರಸಭೆ ಕಾರ್ಯಾಲಯದ ವತಿಯಿಂದ 2024-25ನೇ ಸಾಲಿನ ಆಯವ್ಯಯ ಮಂಡನಾ ಸಭೆಯು ಫೆ.28 ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರಸಭಾ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರ ಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೇಷ್ಮೆ ಇಲಾಖೆಯ ಕಚೇರಿ ಸ್ಥಳಾಂತರ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯಲ್ಲಿ ರೇಷ್ಮೆ ಇಲಾಖೆಯು ಈ ಮುಂಚೆ ತಾತ್ಕಾಲಿಕವಾಗಿ ತಾಲೂಕು ಕಚೇರಿಯ ಮೊದಲನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದೀಗ ರೇಷ್ಮೆ ಇಲಾಖೆ ಉಪ ನಿರ್ದೇಶಕರ ಕಚೇರಿ ಕಾರ್ಯಾಲಯವನ್ನು 160/ಎ, 3ನೇ ಮುಖ್ಯ ರಸ್ತೆ, ರಾಜೀವ್ ನಗರ ಪಾರ್ಕ್ ಹಿಂಭಾಗ, ಹೊಸಪೇಟೆಯಲ್ಲಿ ಪ್ರಾರಂಭಿಸಲಾಗಿದೆ ಎಂದು ವಿಜಯನಗರ ಜಿಲ್ಲಾ ಪಂಚಾಯತಿಯ ರೇಷ್ಮೆ ಕೃಷಿ ಉಪನಿರ್ದೇಶಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ ಸಂಖ್ಯೆ 9480409030 ಸಂಪರ್ಕಿಸಬಹುದು.

## ವಿದ್ಯಾನಿಧಿ ವಿದ್ಯಾರ್ಥಿ ವೇತನ ಪಡೆಯಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

2023-24 ನೇಸಾಲಿನಲ್ಲಿ ಮುಖ್ಯಮಂತ್ರಿ ರೈತ ವಿದ್ಯಾನಿದಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿ ವೇತನ ಪಡೆಯಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯವು ರೂ.2.5 ಲಕ್ಷ ಮೀರಿರಬಾರದು ಎಂಬ ಷರತ್ತನ್ನು ವಿಧಿಸಿರುವುದರಿಂದ ಸಾಮಾನ್ಯ ವರ್ಗದಡಿ ಬರುವ ರೈತರ ಮಕ್ಕಳು ತಮ್ಮ ಪೋಷಕರ ಆದಾಯ ಪ್ರಮಾಣ ಪತ್ರವನ್ನು ರಾಜ್ಯ ವಿದ್ಯಾರ್ಥಿ ವೇತನತಂತ್ರಾಂಶದಲ್ಲಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದ್ದು ಫೆ.29ರೊಳಗೆ ಸಲ್ಲಿಸಲು ತಿಳಿಸಿದೆ ಎಂದು ವಿಜಯನಗರ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಾದ ಶರಣಪ್ಪ ಬಿ.ಮುದಗಲ್ ತಿಳಿಸಿದ್ದಾರೆ.




# ನಮ್ಮ ಹಣ ನಮಗೆ ಕೊಡಿ

### ಗ್ಯಾರಂಟಿಗಳ ಸರಿದೂಗಿಸಲು ದೇಗುಲಗಳಲ್ಲಿ ಹುಂಡಿಗಳ ಹೆಚ್ಚಿಸಿ, ಅನ್ಯಕೋಮಿನ ಪ್ರಾರ್ಥನ ಮಂದಿರಳಿಗೆ ಹಣ ಬಳಕೆ

### ಕೈ ಖಜಾನಿ ಖಾಲಿ । ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನಕ್ಕೂ ಕೈ ಹಾಕಿದ ರಾಜ್ಯ ಕಾಂಗ್ರೆಸ್ ಸರ್ಕಾರ : ಬಿಜೆಪಿ ಆರೋಪ

### ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ರಾಜ್ಯ ಎಸ್ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತ ಸರ್ಕಾರದ ವಿರುದ್ಧ ಆಕ್ರೋಶ

**ಹಂಪಿ ಟೈಮ್ಸ್ ಹೊಸಪೇಟೆ**

ದಲಿತ ಸಮುದಾಯಕ್ಕೆ ಮೀಸಲಿಟ್ಟಿದ್ದ 11,144 ರೂ ಕೋಟಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಸಮುದಯಾಯದ ಅಭಿವೃದ್ಧಿಗೆ ಬಳಸದೇ ಚುನಾವಣೆಯಲ್ಲಿ ಘೋಷಿಸಿಕೊಂಡಿದ್ದ ಗ್ಯಾರಂಟಿಗಳಿಗೆ ಕಾಂಗ್ರೆಸ್ ಸರ್ಕಾರ ಬಳಸಿಕೊಂಡು ದಲಿತ ಸಮುದಾಯಕ್ಕೆ ವಂಚಿಸಿದೆ. ಕಾಂಗ್ರೆಸ್ ಸರ್ಕಾರ ಬರೀ ಮಾತಿನಲ್ಲೆ ದಲಿತಪರ ಕಾಳಜಿ ತೋರುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಆರೋಪಿಸಿದರು.

ನಗರದ ತಾಲೂಕು ಕಚೇರಿ ಎದುರು ಕಾಂಗ್ರೆಸ್ ಸರ್ಕಾರದ ದಲಿತ ವಿರೋಧಿ ನೀತಿ ವಿರುದ್ಧ ಬಿಜೆಪಿಯಿಂದ ಜರುಗಿದ ಪ್ರತಿಭಟನೆಯಲ್ಲಿ ಶುಕ್ರವಾರ ಮಾತನಾಡಿದರು. ಸರ್ಕಾರದ ಗ್ಯಾರಂಟಿಗಳು ತೂಗೂಯ್ಯಾಲೆಯಲ್ಲಿವೆ, ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ತಲುಪಿಲ್ಲ. ಗ್ಯಾರಂಟಿಗಳಿಗೆ ಹಣ ಜೋಡಿಸಿಸಲು ದೇವಸ್ಥಾನಗಳಲ್ಲಿ ಹುಂಡಿಗಳನ್ನು ಹೆಚ್ಚಿಸಿದೆ. ದಲಿತರ ಅನುದಾನವನ್ನು ಕಿತ್ತುಕೊಂಡಿದೆ. ದಲಿತರ ಹಿತರಕ್ಷಣೆ ಕೇವಲ ಭಾಷಣದಲ್ಲಿದೆ. ಸಿಎಂ ಸಿದ್ದರಾಮಯ್ಯನವರು ಅಲ್ಪಸಂಖ್ಯಾತರ ಓಟು ಬ್ಯಾಂಕಿಗಾಗಿ 10 ಸಾವಿರ ಕೋಟಿ ರೂ ಹಣ ವೆಚ್ಚಕ್ಕೆ ಸಿದ್ದರಾಗಿದ್ದಾರೆ. ಇನ್ನುಳಿದ ಸಮುದಾಯ ಹಾಗೂ ಸಮಾಜದ ಅಭಿವೃದ್ಧಿಗೆ ಗ್ಯಾರಂಟಿಗಳು ಅಡ್ಡಿಯಾಗುತ್ತವೆ. ಮೊರಾರ್ಜಿ ಶಾಲೆಯ ಅಭಿವೃದ್ಧಿ ಮತ್ತು ಹೊಸ ಶಾಲೆಗಳ ಆರಂಭಕ್ಕೆ ಮೀಸಲಾದ ಹಣವನ್ನು ಇತರ ಯೋಜನೆಗಳಿಗೆ ಬಳಕೆಯಾಗಿ ದಲಿತ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ಗ್ಯಾರಂಟಿಗಳಿಂದ ದಲಿತ ಹಾಗೂ ಹಿಂದುಳಿದ ವಿದ್ಯಾರ್ಥಿಗಳ ಕನಸು ಕಮರುತ್ತಿವೆ. ರಾಜ್ಯದಲ್ಲಿ ಎಸ್ಸಿ,ಎಸ್ಟಿ ವರ್ಗದವರ ಗೃಹ ನಿರ್ಮಾಣ ಯೋಜನೆಯು ಸ್ಥಗಿತಗೊಂಡಿದೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಸಾವಿರಾರು ಮನೆಗಳನ್ನು ನಿರ್ಮಿಸಿ ಕೇಂದ್ರ ಸರ್ಕಾರ ಹಂಚುತ್ತಿದೆ. ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ರೈತನಿಧಿಯ ವಿದ್ಯಾರ್ಥಿ ವೇತನ, ಕಿಸಾನ್ ಸಮ್ಮಾನ್ ಯೋಜನೆಗೆ ಹೆಚ್ಚುವರಿಯಾಗಿ ನೀಡುತ್ತಿದ್ 4 ಸಾವಿರ ರೂಪಾಯಿಗೂ ಕತ್ತರಿ ಹಾಕಿದ್ದಾರೆ. ಎಸ್ಸಿ,ಎಸ್ಟಿ ಪಂಗಡದವರಲಿ ಉದ್ಯಮಶೀಲತೆ ಉತ್ತೇಜಿಸುವ ಯೋಜನೆ ಕೈಗೊಳ್ಳಲು ಸರ್ಕಾರಕ್ಕೆ ಆಸಕ್ತಿ ಇಲ್ಲದಾಗಿದೆ. ದಲಿತ ಉದ್ಯಮಿಗಳಲ ಉತ್ತೇಜನಕ್ಕೆ ಬಜೆಟ್‌ನಲ್ಲಿ ಘೋಷಣೆಯಾಗಿಲ್ಲ. ದಲಿತರಿಗೆ ದೊರೆಯಬೇಕಿದ್ದ ಅನುದಾನ ನೀಡುವುದನ್ನು ನಿರಾಕರಿಸಿ, ಸಂವಿಧಾನ ಜಾಥ ಮೂಲಕ ಜನರನ್ನು ಮರುಳು ಮಾಡುತ್ತಿದೆ. ಸಂವಿಧಾನ ಬದ್ಧತೆ ಕೇವಲ ಪ್ರಚಾರಕ್ಕೆ ಸೀಮಿತವಾಗಿದ್ದು, ಆಚರಣೆಯಲ್ಲಿ ಶೂನ್ಯವಾಗಿದೆ. ಮುಂಗಡ ಪತ್ರದಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಕೂಡಲೇ ವಾಪಸ್ ಪಡೆಯಬೇಕು. ಸಂವಿಧಾನ ಬದ್ಧ ಕಲ್ಯಾಣ ಯೋಜನೆಗಳ ಹಣ ದುರುಪಯೋಗ ಸಲ್ಲದು, ದಲಿತರಿಗೆ ಅನ್ಯಾಯವೆಸಗಿರುವುದನ್ನು ಸರ್ಕಾರ ಕೂಡಲೆ ಅರಿತು, ಎಚ್ಚೆತ್ತುಕೊಂಡು ತಪ್ಪನ್ನು ಸರಿಪಡಿಸಿಕೊಳ್ಳದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.



**ನಮ್ಮಹಣ ನಮಗೆ ಕೊಡಿ:** ರಾಜ್ಯ ಎಸ್ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತ ಮಾತನಾಡಿ, ಸಿಎಂ ಸಿದ್ದರಾಮಯ್ಯ ಬಾಯಲ್ಲಿ ಮಾತ್ರ ದಲಿತರ ಬಗ್ಗೆ ಕಾಳಜಿ ತೋರಿಸುತ್ತಾರೆ. ಈವರೆಗೂ ಯಾವ ಸಿಎಂ ದಲಿತರ ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನವನ್ನು ಬಳಸಿಕೊಂಡ ಉದಾಹರಣೆಗಳಿಲ್ಲ. ಆದರೆ ಈಗಿನ ಕಾಂಗ್ರೆಸ್ ಸರ್ಕಾರ ದಲಿತರ ಅನುದಾನವನ್ನು ಬಳಸಿಕೊಂಡಿದೆ. ಕೂಡಲೇ ದಲಿತರ ಅನುದಾನವನ್ನು ಮರುನೀಡಬೇಕು. ನಮ್ಮ ಹಣ ನಮಗೆ ಕೊಡಿ. ಹಿಂದೂ ದೇಗುಲದ ಭಕ್ತರ ಹಣವನ್ನು ಅನ್ಯಕೋಮಿನ ಜನರ ಪ್ರಾರ್ಥನಾ ಮಂದಿಗಳಿಗೆ ಬಳಸುತ್ತಿರುವುದು ಖಂಡನೀಯ. ಲೋಕಸಭೆ ಚುನಾವಣೆಯಲ್ಲಿ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಮಂಡಲ ಅಧ್ಯಕ್ಷ ಶಂಕರ ಮೇಟಿ, ವಿವಿಧ ಮೋರ್ಚಾದ ಪದಾಧಿಕಾರಿಗಳಾದ ರೇವಣಸಿದ್ದಪ್ಪ, ಕಿಚಿಡಿ ಕೊಟ್ರೇಶ, ಕಿರಣ್ ಶಂಕ್ರಿ, ರಾಘವೇಂದ್ರ, ಸತ್ಯನಾರಾಯಣ, ಶಶಿಧರಸ್ವಾಮಿ, ಜೀವರತ್ನಂ, ಸೇರಿದಂಥೆ ಕಾರ್ಯಕರ್ತರು ಇದ್ದರು.

## ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿ

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ। ಪ್ರತಿಶತ 100 ರಷ್ಟು ಪ್ರಗತಿಗೆ ಕ್ರಮವಹಿಸಿ

### ಜಿಲ್ಲೆಯಲ್ಲಿ 0-5 ವರ್ಷದ ಮಕ್ಕಳ ಸಂಖ್ಯೆ 1.39,000 । 6-19 ವರ್ಷ-3,11,325



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಯಾವುದೇ 5 ವರ್ಷದೊಳಗಿನ ಮಕ್ಕಳು ಪೊಲಿಯೋ ಲಸಿಕೆಯಿಂದ ವಂಚಿತ ವಾಗದಂತೆ ಎಲ್ಲಾ ಮಕ್ಕಳಿಗೂ ಪೊಲಿಯೊ ಲಸಿಕೆ ನೀಡಿ ಜಿಲ್ಲೆಯ ಪ್ರಗತಿಯು ಪ್ರತಿಶತ 100 ರಷ್ಟು ಆಗುವಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಮತ್ತು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಯ ಕಾರ್ಯಕ್ರಮದ ಜಿಲ್ಲಾ ಮಟ್ಟದ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದ ಅಂಗವಾಗಿ 1 ವರ್ಷದಿಂದ 19 ವರ್ಷದ ಎಲ್ಲಾ ಮಕ್ಕಳಲ್ಲಿ ಜಂತುಹುಳು ನಿವಾರಣೆಗಾಗಿ ಸರ್ಕಾರದಿಂದ ಮಾತ್ರೆಗಳನ್ನು ಉಚಿತವಾಗಿ ಎಲ್ಲಾ ಅಂಗನವಾಡಿ, ಶಾಲಾ ಕಾಲೇಜುಗಳಲ್ಲಿ ನೀಡಲಾಗುತ್ತದೆ. ಅದರಂತೆ ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಜಂತುಹುಳು ನಿವಾರಣಾ ಮಾತ್ರೆಗಳನ್ನು ವಿತರಿಸಲಾಗುತ್ತದೆ. ಆದ್ದರಿಂದ ಎಲ್ಲಾ ಇಲಾಖೆಗಳು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸೂಚಿಸಿದರು. ಕಾರ್ಯಕ್ರಮದ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿ ದರು.

ಜಿಪಂ ಸಿಇಒ ಸದಾಶಿವ ಪ್ರಭು ಬಿ. ಮಾತನಾಡಿ, ಗ್ರಾಮಗಳಲ್ಲಿ ಹಾಗು ನಗರ ಪ್ರದೇಶಗಳಲ್ಲಿ ವಾಸವಿರುವ ಜನಸಂಖ್ಯೆಗೆ ಪೋಲಿಯೋ ಲಸಿಕೆಯ ಸೌಲಭ್ಯ ಕಲ್ಪಿಸುವುದರ ಜೊತೆಗೆ ದುರ್ಗಮ ಪ್ರದೇಶಗಳಲ್ಲಿ ವಾಸವಿರುವ ಜನಸಂಖ್ಯೆಗೂ ಈ ಪೋಲಿಯೋ ಲಸಿಕೆಯನ್ನು ನೀಡಿದಲ್ಲಿ ಸದರಿ ಕಾರ್ಯಕ್ರಮದ ಉದ್ದೇಶ ಸಾಕಾರ ವಾಗುವುದರ ಜೊತೆಗೆ ಪೋಲಿಯೋ ವನ್ನು ಜಾಗತಿಕ ಮಟ್ಟದಿಂದ ನಿರ್ಮೂಲನೆ ಮಾಡಬಹುದು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಶಂಕರ್ ನಾಯ್ಕ್ ಮಾತನಾಡಿ, ಮಾರ್ಚ್ 3 ರಿಂದ ಮಾರ್ಚ್ 6ರವರೆಗೆ ರಾಷ್ಟ್ರೀಯ ಫಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಸರ್ಕಾರವು ಹಮ್ಮಿಕೊಂಡಿದ್ದು ಈ ಹಿಂದೆ ಎಷ್ಟೇ ಬಾರಿ ಪೋಲಿಯೋ ಹಾಕಿಸಿದ್ದರೂ ಈ ಸುತ್ತಿನಲ್ಲಿ ಮತ್ತೆ ಪೋಲಿಯೋ ಹನಿ ಹಾಕಿಸಿ ಕೊಳ್ಳುವುದರ ಮೂಲಕ ಪೋಲಿಯೋ ನಿರ್ಮೂಲನೆಗೆ ಸಹಕರಿಸಲು ಕೋರಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಜಂಬಯ್ಯ ಬಿ ಮಾತನಾಡಿ, ವಿಜಯನಗರ ಜಿಲ್ಲೆಯ 5 ವರ್ಷದೊಳಗಿನ ಮಕ್ಕಳ ಸಂಖ್ಯೆಯು 1,39,000 ಇದ್ದು, 0-19 ವರ್ಷದೊಳಗಗಿನ ಒಟ್ಟು 4,50,325 ಮಕ್ಕಳಿದ್ದಾರೆ. ಈ ಎಲ್ಲಾ ಮಕ್ಕಳಿಗೆ ಲಸಿಕೆ ಹಾಕಲು 1034 ಬೂತ್‌ಗಳು ಮತ್ತು 862 ಮನೆಗಳಿಗೆ ತೆರಳಿ ಪೋಲಿಯೋ ಹನಿ ಹಾಕಲು ತಂಡಗಳನ್ನು ರಚಿಸಲಾಗಿದ್ದು, 2184 ಲಸಿಕಾದಾರ ರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ರಾಧಿಕ, ಡಾ.ಕಮಲಮ್ಮ ಹಾಗೂ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.



ಬಳ್ಳಾರಿಯಲ್ಲಿ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನದ ಭಿತ್ತಿಪತ್ರ ಶುಕ್ರವಾರ ಬಿಡುಗಡೆಗೊಳಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸವರೆಡ್ಡಿ, ಜಿಲ್ಲಾ ಕುಟುಂಬ ಕಲ್ಯಾಣ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸುಜಾತ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತೀತರರು ಉಪಸ್ಥಿತರಿದ್ದರು.

## ಬೀದಿ ನಾಟಕಗಳಿಂದ ಮನರಂಜನೆಯ ಜೊತೆ ಅರಿವು ಹೆಚ್ಚಳ : ಶಿವಶಂಕರ

**ಹಂಪಿ ಟೈಮ್ಸ್ ಹೊಸಪೇಟೆ**

ಬೀದಿ ನಾಟಕ ಕಲೆಯು ಪರಿಣಾಮಕಾರಿ ಸಂವಹನ ಮಾಧ್ಯಮವಾಗಿದ್ದು ಮನರಂಜನೆಯ ಮೂಲಕ ಜನರಲ್ಲಿ ಅರಿವು ಮೂಡಿಸುವಲ್ಲಿ ಸಹಕಾರಿ. ವಿಜಯನಗರ ಕಾಲುವೆಗಳ ಇತಿಹಾಸ, ಮಹತ್ವ, ಅವುಗಳ ಸಂರಕ್ಷಣೆಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ, ಮಹಿಳೆಯರ ಪಾಲ್ಗೊಳ್ಳುವಿಕೆ, ಸುಸ್ಥಿರ ಕೃಷಿ ಇತ್ಯಾದಿ ಮಾಹಿತಿಗಳನ್ನು ಯೋಜನಾ ವ್ಯಾಪ್ತಿಯ ಹಳ್ಳಿಗಳಲ್ಲಿ ತಲುಪಿಸಲು ಈ ಮಾಧ್ಯಮವನ್ನು ಬಳಸಿಕೊಳ್ಳಲಾಗುತ್ತಿದೆ. ಸಾರ್ವಜನಿಕರು ಇದರ ಉಪಯೋಗಪಡೆದು ಕೊಳ್ಳಬೇಕು ಎಂದು ತುಂಗಭದ್ರಾ ಜಲಾಶಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್ ಅಭಿಪ್ರಾಯಪಟ್ಟರು.

ತಾಲೂಕಿನ ಮಲಪನಗುಡಿ ಗ್ರಾಮದಲ್ಲಿ ನಡೆದ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯ "ನಮ್ಮ ಕಾಲುವೆ ನಮ್ಮ ಜವಾಬ್ದಾರಿ" ಬೀದಿ ನಾಟಕ ಸರಣಿಯನ್ನು ಜಂಬೆ ವಾದ್ಯ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾದ ಇಜಿಐಎಸ್ ಯೋಜನಾ ಸಮಾಲೋಚಕ ತಂಡದ ಮುಖ್ಯಸ್ಥ ಆರ್. ದೊರೈಸ್ವಾಮಿ ಮಾತನಾಡಿ "ವಿಜಯನಗರ ಅರಸರು ಕೊಡುಗೆಯಾಗಿ ನೀಡಿದ ಅಣೆಕಟ್ಟು ಮತ್ತು ಕಾಲುವೆಗಳನ್ನು ಈಗಿನ ಸಂದರ್ಭದಲ್ಲಿ ಮಾಲಿನ್ಯದಿಂದ ರಕ್ಷಿಸುವುದೇ ಸವಾಲಾಗಿದೆ. ಜನರ ಸಹಕಾರದಿಂದ ಮಾತ್ರ ಇವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯ. ಬೀದಿ ನಾಟಕದಲ್ಲಿ ಈ ಅಂಶಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ನಾಟಕವನ್ನು ವೀಕ್ಷಿಸಿ ಕಲಾವಿದರನ್ನು ಪ್ರೋತ್ಸಾಹಿಸಬೇಕು" ಎಂದರು.

ಗ್ರಾಮದ ಹಿರಿಯರಾದ ಸಿದ್ದನಗೌಡ ಮಾತನಾಡಿ, ಇಲಾಖೆಯು ಕಾಲುವೆ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸಿಕೊಡಬೇಕು, ಅದೇ ರೀತಿ ನಮ್ಮ ರೈತರು ನೀರನ್ನು ಅನಗತ್ಯವಾಗಿ ಪೋಲು ಮಾಡದೇ ವೈವಿಧ್ಯಮಯ ಬೆಳೆಗಳನ್ನು ಹಾಕುವುದರತ್ತ ಗಮನಹರಿಸಬೇಕು ಎಂದು ಮನವಿ ಮಾಡಿದರು. ಮಲಪನಗುಡಿ ಮತ್ತು ಕಮಲಾಪುರ ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರಾದ ಹುಲಿಗೆಪ್ಪ ಮತ್ತು ಸಿದ್ಧರಾಮಯ್ಯ, ಸಮಾಲೋಚಕ ತಂಡದ ಪರಿಸರ ತಜ್ಞೆ ಡಾ.ಸೀಮಾ ಶ್ರೀವಾಸ್ತವ, ರಂಗ ನಿರ್ದೇಶಕ ಪಿ.ಅಬ್ದುಲ್ಲಾ ಉಪಸ್ಥಿತರಿದ್ದರು. ಶಿಕ್ಷಕ ವಿಶ್ವನಾಥ್ ನಿರೂಪಿಸಿ, ಸಮುದಾಯ ಸಂಘಟಕ ಚಂದ್ರವರ್ಮರಾಜ ವಂದಿಸಿದರು. ಹೊಸಪೇಟೆಯ ಭಾವೈಕ್ಯತಾ ವೇದಿಕೆ ತಂಡದ ಕಲಾವಿದರು ನಾಟಕಗಳನ್ನು ಅಭಿನಯಿಸಿ ಜಾಗೃತಿ ಮೂಡಿಸಿದರು.




## ಬ್ಯಾಲಹುನಸಿ, ತುಂಬಿನಕೇರಿ ಗ್ರಾಮಗಳಲ್ಲಿ ಬೀದಿನಾಟಕ

**ಹಂಪಿ ಟೈಮ್ಸ್ ಹೊಸಪೇಟೆ**

ಜನನಿ ಪುಷ್ಪಕಲಾ ಯುವಕ ಸಂಘದ ಕಲಾ ತಂಡದವರು ಫೆ.23 ರಂದು ಹೂವಿನಹಡಗಲಿ ತಾಲೂಕಿನ ಬ್ಯಾಲಹುನಸಿ ಮತ್ತು ತುಂಬಿನಕೇರಿ ಗ್ರಾಮಗಳಲ್ಲಿ ಬೀದಿನಾಟಕ ಪ್ರದರ್ಶಿಸಿದರು. ಕಲಾವಿದರು ಗ್ರಾಮದಲ್ಲಿ ಸಂಚರಿಸಿ, ತಮಟೆ ಬಾರಿಸಿ, ಹಾಡು ಹೇಳಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಅರಿವು ಮೂಡಿಸಿದರು. ಶುಚಿತ್ವ, ನೀರಿನ ಮಿತ ಬಳಕೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಜನ ಜಾಗೃತಿ ಮೂಡಿಸಿದರು.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA